ANANTHKUMAR PRATISHTHANA

# ಅನಂತಪಥ



ಪುಟ 5
"ದೇವಾಲಯ ವಾಸ್ತುವೈಭವ"
ವಿಚಾರ ಸಂಕಿರಣ
ಶತಾವಧಾನಿ ಡಾ|| ಆರ್. ಗಣೇಶ್

ಸಂಪುಟ - 4 | ಫೆಬ್ರವರಿ - 2024 | ಸಂಚಿಕೆ - 44

# ರಾಜಕಾರಣದ ಅಪೂರ್ವ ಜೋಡಿ: ಅದ್ವಾನಿ-ಅನಂತ



ಭಾರತ ಸರ್ಕಾರವು ಮಾಜಿ ಉಪಪ್ರಧಾನಿ, ಲಾಲ್ ಕೃಷ್ಣ ಅದ್ವಾನಿಯವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ "ಭಾರತ ರತ್ನ"ವನ್ನು ನೀಡಿ ಗೌರವಿಸಿದೆ. ಈ ಸಂದರ್ಭದಲ್ಲಿ ಅದಮ್ಯ ಚೇತನ ಸಂಸ್ಥೆ ಮತ್ತು ಅನಂತಕುಮಾರ್ ಪ್ರತಿಷ್ಠಾನ ಗಳ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಸಹಜವಾಗಿಯೇ ಇದು ಅದ್ವಾನಿಯವರ ಜೊತೆ ಅನಂತಕುಮಾರ್ ಅವರಿಗಿದ್ದ ಸಂಬಂಧವನ್ನು ಸ್ಮರಿಸಿಕೊಳ್ಳುವ ಕಾಲ.

ಪ್ರಾರಂಭದಿಂದಲೂ ಭಾರತೀಯ ಜನತಾ ಪಕ್ಷದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರೂ ಅನಂತ ಕುಮಾರರಿಗೆ ಅದ್ವಾನಿಯವರ ಒಡನಾಟವು ಬಹುಶಃ ೧೯೮೯ರಿಂದ ನಿಕಟವಾಯಿತೆನ್ನಬಹುದು. ಅನಂತಕುಮಾರರು ಪಕ್ಷದ ರಾಜ್ಯಕಾರ್ಯದರ್ಶಿಯಾಗಿ ಆಯ್ಕೆಯಾದ ಮೇಲೆ. ತಮ್ಮ ಮೂವತ್ತನೆಯ ವಯಸ್ಸಿಗೆ ಹಿರಿಯ ಹೊಣೆ ಹೊತ್ತು ರಾಜ್ಯದಾದ್ಯಂತ ಬಿರುಗಾಳಿಯಂತೆ ಸುತ್ತುತ್ತಿದ್ದ ಅನಂತಕುಮಾರರಿಗೆ ಅದ್ವಾನಿಯವರು ೧೯೯೦ರಲ್ಲಿ ಸೋಮನಾಥದಿಂದ ಪ್ರಾರಂಭಿಸಿದ ರಥಯಾತ್ರೆಯಲ್ಲಿ ಹೊಸ ಅವಕಾಶ ಗೋಚರಿಸಿತು. ಈ ರಥಯಾತ್ರೆಯು ಆಂಧ್ರಪ್ರದೇಶ ಹಾಗೂ ಕರ್ನಾಟಕ ಗಡಿಯಂಚಿನಿಂದ ತೆರಳುತ್ತಿತ್ತು. ಯಾತ್ರೆಯು ಕರ್ನಾಟಕದಲ್ಲಿ ಪ್ರವೇಶಿಸುವ ಉದ್ದೇಶವಿರಲಿಲ್ಲ ಆದರೆ, ಬಿಜೆಪಿ ಬಲವರ್ಧನೆಗಾಗಿ ಕರ್ನಾಟಕದಲ್ಲೂ ರಥಯಾತ್ರೆಯ ಪ್ರವೇಶದ ಅಗತ್ಯವನ್ನು ಅನಂತಕುಮಾರರು ಪ್ರತಿಪಾದಿಸಿ, ತಮ್ಮ ಮಿತ್ರ ಪ್ರಮೋದ್ ಮಹಾಜನ್ ಮೂಲಕ ಅದ್ವಾನಿಯವರನ್ನು ಸಂಪರ್ಕಿಸಿ ಬೀದರ ಜಿಲ್ಲೆಯ ಹುಮನಾಬಾದ್ ಮೂಲಕ ಸಂಚರಿಸುವಂತೆ ವ್ಯವಸ್ಥೆ ಮಾಡಿದ್ದರು. ರಾಜ್ಯದ ಒಂದು ಸಣ್ಣ ಪ್ರದೇಶದಲ್ಲಿ ಮಾತ್ರವೇ ಈ ರಥಯಾತ್ರೆ ಸಂಚರಿಸಿದ್ದರೂ ಅದು ಬಿಜೆಪಿಯತ್ತ ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿತ್ತು. ಅನಂತಕುಮಾರರ ನಿಷ್ಠೆ, ದೂರದರ್ಶಿತ್ವ ಮತ್ತು ಸಂಘಟನಾ ಚಾತುರ್ಯಗಳು ಅದ್ವಾನಿಯವರ ಗಮನ ಸೆಳೆದವು. ಅಲ್ಲಿಂದ ಮುಂದೆ ಅವರ ನಡುವಣ ಬಾಂಧವ್ಯವು ಗಟ್ಟಿಯಾಗುತ್ತ ಸಾಗಿ, ಅದ್ವಾನಿಯವರು ಅನಂತಕುಮಾರರನ್ನು ತಮ್ಮ ಮಗ ಎಂದು ಪರಿಗಣಿಸುವ ಮಟ್ಟಕ್ಕೆ ಬೆಳೆಯಿತು.

ಅದ್ವಾನಿಯವರು ಕೈಗೊಂಡ ಆರೂ ರಥಯಾತ್ರೆಗಳಲ್ಲಿ ಅನಂತಕುಮಾರರ ಪಾತ್ರವಿತ್ತು. ಮೊದಲ ಐದು ಯಾತ್ರೆಗಳಲ್ಲಿ ಪ್ರಮೋದ್ ಮಹಾಜನ್ ಅವರಿಗೆ ಸಹಾಯಕರಾಗಿದ್ದ ಅನಂತಕುಮಾರ್ ೨೦೧೧ರ ಜನಚೇತನಾ ಯಾತ್ರೆಯ ಪೂರ್ಣ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು. ಅದ್ವಾನಿಯವರು ಭಾರತೀಯ ಜನತಾಪಕ್ಷದ ಭವಿಷ್ಯದ ನಾಯಕರು ಎಂದು ಗುರುತಿಸಿದ ಆರು ಜನರಲ್ಲಿ ಅನಂತಕುಮಾರರೂ ಒಬ್ಬರು. ಇವರನ್ನು Delhi Six ಎಂದು ಕರೆಯಲಾಗುತ್ತಿತ್ತು. ಪುಟ 8 ರಲ್ಲಿ ಮುಂದುವರಿದಿದೆ

# ಸ್ವದೇಶಿ ಮೇಳದಲ್ಲಿ ಅದಮ್ಯ ಚೇತನ






ಬೆಂಗಳೂರಿನ ಜಯನಗರದ ಚಂದ್ರಗುಪ್ತ ಮೌರ್ಯ ಮೈದಾನದಲ್ಲಿ(ಶಾಲಿನಿ ಮೈದಾನ) ಸ್ವದೇಶಿ ಜಾಗರಣ ಮಂಚ್ ಐದು ದಿನಗಳ ಕಾಲ (2024ರ ಫೆ.7ರಿಂದ ಫೆ.11ರವರೆಗೆ) ಆಯೋಜಿಸಿದ್ದ" ಸ್ವದೇಶಿ ಮೇಳ'ದಲ್ಲಿ "ಅದಮ್ಯ ಚೇತನ" ಸಂಸ್ಥೆಯು ಸ್ವಾಭಿಮಾನದ ಸ್ವಾವಲಂಬನೆ ಮೆರೆಯಿತು.

ನಿರುದ್ಯೋಗ ಸಮಸ್ಯೆ-ಪರಿಹಾರ ಮಾರ್ಗಗಳು ಕುರಿತಂತೆ ಕಾಲೇಜು ವಿದ್ಯಾರ್ಥಿಗಳೊಂದಿಗೆ ಸಂವಾದ, ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ದೇಶೀಯ ಕ್ರೀಡೆಗಳು, ಸ್ವ ಉದ್ಯೋಗ ತರಬೇತಿ, ಪಂಚಗವ್ಯ ಚಿಕಿತ್ಸೆ, ತಾರಸಿ ತೋಟ ತರಬೇತಿ ಕಾರ್ಯಾಗಾರ, ಕುಟುಂಬ ಪ್ರಬೋಧನ, ಸೌಭಾಗ್ಯವತಿ ಉಡುಗೊರೆ, ಆಯುರ್ವೇದ ಶಿಬಿರ, ಗೋ ಉತ್ಪನ್ನ ತಯಾರಿಕಾ ಶಿಬಿರ, ಜನಪದ ಸಂಜೆ, ನಿತ್ಯ ಬಳಕೆ ವಸ್ತುಗಳ ತಯಾರಿಕಾ ಶಿಬಿರ, ವೈವಿಧ್ಯಮಯ ಕಾರ್ಯಕ್ರಮಗಳನ್ನು ಒಳಗೊಂಡಿತ್ತು. ಸ್ವದೇಶಿ ಪರಿಕಲ್ಪನೆಯನ್ನು, ಸಾಂಸ್ಕೃತಿಕ ಸಮಾರಂಭಗಳ ಮೂಲಕ ಜನಮಾನಸದಲ್ಲಿ ಮೂಡಿಸುವಲ್ಲಿ ಮೇಳವು ಯಶಸ್ವಿಯಾಯಿತು. ಪುಟ 6 ರಲ್ಲಿ ಮುಂದುವರಿದಿದೆ

# ಹುಬ್ಬಳ್ಳಿಯಲ್ಲಿ ನಿತ್ಯ ಅನ್ನದಾನ ಯೋಜನೆಯ ಪ್ರಾರಂಭ



ಅದಮ್ಯಚೇತನ ಸಂಸ್ಥೆಯು ಹಸಿದವರಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಕಲ್ಪಿಸುವ ನಿತ್ಯ ಅನ್ನದಾನ ಯೋಜನೆಯು ಬೆಂಗಳೂರಿನ ಹಲವು ಕೇಂದ್ರಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿರುವುದು ಸರಿಯಷ್ಟೆ. ಈ ಯಶಸ್ಸಿನ ಸಾರ್ಥಕತೆಯನ್ನು ಮನಗಂಡು, ಅದಮ್ಯ ಚೇತನವು ಇದೀಗ ನಿತ್ಯ ಅನ್ನದಾನ ಸೇವೆಯನ್ನು ಹುಬ್ಬಳ್ಳಿ ನಗರಕ್ಕೂ ವಿಸ್ತರಿಸುವ ಉತ್ಸಾಹ ತೋರಿದೆ. ಹುಬ್ಬಳ್ಳಿಯ ಸ್ಟೇಷನ್ ರಸ್ತೆಯ ಶ್ರೀ ಈಶ್ವರ ದೇವಸ್ಥಾನದ ಬಳಿ "ಅದಮ್ಯ ಚೇತನ"ದಿಂದ ಸಾರ್ವಜನಿಕರಿಗಾಗಿ ನಿತ್ಯ "ಅನ್ನದಾಸೋಹ" ಸೇವೆ ಆರಂಭಿಸಲಾಗಿದೆ. ಪ್ರಶಂಸಾರ್ಹವಾದ ಈ ಕಾರ್ಯಕ್ರಮವು 2024ರ ಫೆ. 18 ರಂದು ಪ್ರಾರಂಭಗೊಂಡಿತು. ಅನ್ನದಾನದ ಮೊದಲ ಕಾರ್ಯಕ್ರಮದ ಸಡಗರದಲ್ಲಿ ಅದಮ್ಯಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಎಚ್.ಎನ್. ನಂದಕುಮಾರ್, ಶ್ರೀಮತಿ ಭಾರತಿ ನಂದಕುಮಾರ್, ಲಕ್ಷ್ಮಣರಾವ್ ಓಕ್ ದಂಪತಿಗಳು, ಕುಮಾರಿ ವಿಜೇತಾ ಅನಂತಕುಮಾರ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಆನೆ ಕನ್ನಂಬಾಡಿಯ ನರಸಿಂಹ ದೇವಾಲಯ

ಶ್ರದ್ಧೆಯ ಶಿಲ್ಪ

ಟಿ. ಎಸ್. ಗೋಪಾಲ್

ಮೈಸೂರು-ಹಾಸನ-ಮಂಡ್ಯ ಜಿಲ್ಲೆಗಳ ಗಡಿಭಾಗದಲ್ಲಿರುವ ಆನೆಕನ್ನಂಬಾಡಿ ಹೊಳೆನರಸೀಪುರ ತಾಲೂಕಿನ ಒಂದು ಗ್ರಾಮ. ಈ ಗ್ರಾಮದ ಆಸುಪಾಸಿನಲ್ಲೇ ಇರುವ ಮಂಡ್ಯ ಜಿಲ್ಲೆಯ ಭೇರ್ಯ, ಮೈಸೂರು ಜಿಲ್ಲೆಯ ಸಾಲಿಗ್ರಾಮ, ಮಿರ್ಲೆ ಮೊದಲಾದ ಸ್ಥಳಗಳಲ್ಲಿ ಹೊಯ್ಸಳ ದೇವಾಲಯಗಳನ್ನು ಕಾಣಬಹುದಾದಂತೆ ಆನೆ ಕನ್ನಂಬಾಡಿಯಲ್ಲೂ ಹೊಯ್ಸಳ ಕಾಲದ ದೇವಾಲಯವಿದೆ.

ಪ್ರವಾಸಿಗರಿಗೆ ಅಷ್ಟೇನೂ ಪರಿಚಿತವಲ್ಲದ ಇಲ್ಲಿನ ಲಕ್ಷ್ಮೀನರಸಿಂಹ ದೇವಾಲಯವು ಹೊಯ್ಸಳರ ಸೋಮೇಶ್ವರನ ಆಡಳಿತದ ಕಾಲದಲ್ಲಿ, ಎಂದರೆ 1235 ರಿಂದ 1253ರವರೆಗಿನ ಅವಧಿಯಲ್ಲಿ ನಿರ್ಮಾಣವಾದುದೆಂದು ಹೇಳಲಾಗಿದೆ. ಸೋಮೇಶ್ವರನ ದಂಡನಾಯಕನಾಗಿದ್ದ ಕಂಬಯ್ಯ ಎಂಬಾತನ ಸೇವೆಯನ್ನು ಮೆಚ್ಚಿ ಈ ಗ್ರಾಮವನ್ನು ಅವನಿಗೆ ಜಹಗೀರಾಗಿ ನೀಡಲಾಯಿತೆಂದು ಒಂದು ದಾಖಲೆ ಹೇಳುತ್ತದೆ. ವರ್ತಮಾನದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಈ ದೇಗುಲವನ್ನು ಇತ್ತೀಚೆಗಷ್ಟೇ ಸ್ಥಳೀಯರ ಸಹಕಾರದೊಡನೆ ಜೀರ್ಣೋದ್ಧಾರ ಮಾಡಿದೆ.



ಹೊಯ್ಸಳರ ಕಾಲದಲ್ಲಿ ಅಗ್ರಹಾರವೆಂದು ಹೆಸರು ಪಡೆದಿದ್ದ ಈ ಗ್ರಾಮದಲ್ಲಿ ಆನೆಗಳನ್ನು ಪೋಷಿಸುತ್ತಿದ್ದುದರಿಂದ ಈ ಸ್ಥಳವು ಆನೆ ಕನ್ನಂಬಾಡಿಯೆಂದು ಹೆಸರು ಪಡೆಯಿತೆಂದು ಒಂದು ವಿವರಣೆ ಹೇಳುತ್ತದೆ. ಇಲ್ಲಿನ ದೇವಾಲಯವು ತ್ರಿಕೂಟಾಚಲ ಎಂದರೆ ಮೂರು ಗರ್ಭಗುಡಿಗಳುಳ್ಳ ನಿರ್ಮಿತಿಯಾಗಿದೆ. ಮುಖ್ಯ ಗರ್ಭಗುಡಿಗೆ ಮಾತ್ರ ಶಿಖರವಿದೆ. ಹೊರಗೋಡೆಗಳ ಮೇಲೆ ಯಾವುದೇ ಶಿಲ್ಪಾಲಂಕರಣವಿಲ್ಲ. ಆದರೆ, ಹೊಯ್ಸಳರ ಅನೇಕ ದೇವಾಲಯಗಳಲ್ಲಿ ಗುರುತಿಸಬಹುದಾದಂತೆ, ನಕ್ಷತ್ರಾಕಾರದ ಹಲವು ಕೋನಗಳ ವಿನ್ಯಾಸವೇ ಇಲ್ಲಿನ ದೇವಾಲಯದ ಕಟ್ಟಡಕ್ಕೆ ವಿಶಿಷ್ಟ ಸೊಬಗನ್ನು ತಂದಿದೆ. ದೇಗುಲದ ಪ್ರವೇಶಮಂಟಪದ ಮೆಟ್ಟಲೇರುತ್ತಿದ್ದಂತೆ, ಆಕರ್ಷಕವಾದ ಬಾಗಿಲವಾಡವು ಕಣ್ಸೆಳೆಯುತ್ತದೆ. ದ್ವಾರಬಂಧದ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದಾರೆ. ಚೌಕಟ್ಟಿನ ಲಲಾಟದಲ್ಲಿ ಯೋಗಾನರಸಿಂಹನನ್ನು ಚಿತ್ರಿಸಿದೆ.

ಗುಡಿಯೊಳಗೆ ಪ್ರವೇಶಿಸುತ್ತಿರುವಂತೆ ನವರಂಗ ಮಂಟಪವಿದೆ. ಇಲ್ಲಿನ ಒಳಭಾವಣಿಯಲ್ಲಿ ಹೊಯ್ಸಳ ಶೈಲಿಯ ಬಗೆಬಗೆಯ ವಿನ್ಯಾಸಗಳು ಬೆರಗು ಮೂಡಿಸುತ್ತವೆ. ನಡುವಿನ ಭುವನೇಶ್ವರಿಯ ಕೆಳ ಅಂಚುಗಳಲ್ಲಿ ಪ್ರತಿಯೊಂದು ದಿಕ್ಕಿನಲ್ಲೂ ವಾಹನಾರೂಢರಾದ ದಿಕ್ಪಾಲಕರು ಕಂಡುಬರುತ್ತಾರೆ.

ತ್ರಿಕೂಟಾಚಲವಿರುವ ವೈಷ್ಣವ ದೇವಾಲಯದಲ್ಲಿ ಪೂರ್ವದಿಕ್ಕಿನಿಂದ ನೀವು ದೇಗುಲದೊಳಕ್ಕೆ ಬರುತ್ತೀರಿ. ನಿಮ್ಮೆದುರಿಗೆ ಪೂರ್ವಕ್ಕೆ ಅಭಿಮುಖವಾಗಿ ಮುಖ್ಯ ಗರ್ಭಗುಡಿಯಲ್ಲಿ ವಿಷ್ಣು, ನಿಮ್ಮ ಬಲಭಾಗದಲ್ಲಿ ದಕ್ಷಿಣಾಭಿಮುಖವಾಗಿ ನರಸಿಂಹ. ಎಡಭಾಗದ ಗರ್ಭಗುಡಿಯಲ್ಲಿ ವೇಣುಗೋಪಾಲ ಕೃಷ್ಣನ ವಿಗ್ರಹ ಇರುವುದು ಸಾಮಾನ್ಯ. ಆನೆ ಕನ್ನಂಬಾಡಿಯ ದೇವಾಲಯವನ್ನುಲಕ್ಷ್ಮೀನರಸಿಂಹ ದೇಗುಲವೆಂದು ಗುರುತಿಸುವುದೇನೋ ಸರಿಯೇ. ಇಲ್ಲಿಯೂ ನರಸಿಂಹನ ಶಿಲ್ಪವಿರುವುದು ಬಲಭಾಗದ ಗುಡಿಯಲ್ಲೇ. ಸೌಮ್ಯರೂಪದ ನರಸಿಂಹನು ಮೇಲುಗೈಗಳಲ್ಲಿ ಪದ್ಮ, ಗದೆಗಳನ್ನು ಮುಂದಿನ ಕೈಗಳಲ್ಲಿ ಚಕ್ರ ಶಂಖಗಳನ್ನೂ ಧರಿಸಿದ್ದಾನೆ. ಸರ್ವಾಭರಣಭೂಷಿತನಾದ ನರಸಿಂಹನ ಎಡತೊಡೆಯ ಮೇಲೆ ಲಕ್ಷ್ಮೀದೇವಿಯು ಕುಳಿತಿದ್ದಾಳೆ. ಎಡಗೈಯಲ್ಲಿ ಕಮಲವನ್ನು ಹಿಡಿದ ದೇವಿಯ ಪಾದವೂ ಅರಳಿದ





ಕಮಲವೊಂದರ ಮೇಲೆ ವಿರಮಿಸಿದೆ. ಶಿಲ್ಪದ ಸುತ್ತ ಪ್ರಭಾವಳಿಯ ಅಂಚಿನಲ್ಲಿ ದಶಾವತಾರಗಳನ್ನು ಚಿತ್ರಿಸಿದೆ. ಎತ್ತರವಾದ ಪೀಠದ ಕೆಳಭಾಗದಲ್ಲಿ ಗರುಡನಿದ್ದಾನೆ. ದಕ್ಷಿಣಭಾಗದ ಗರ್ಭಗುಡಿಯಲ್ಲಿರುವ ವೇಣುಗೋಪಾಲನ ವಿಗ್ರಹವು ಹೊಯ್ಸಳ ಶೈಲಿಯ ಉತ್ಕೃಷ್ಟ ಮಾದರಿಗಳಲ್ಲೊಂದು. ತ್ರಿಭಂಗಿಯಲ್ಲಿ ನಿಂತ ಯುವಗೋಪಾಲಕೃಷ್ಣ ಬಗೆಬಗೆಯ ತೊಡುಗೆಗಳಿಂದ ಅಲಂಕೃತನಾಗಿದ್ದಾನೆ. ಕುಚ್ಚುಗಳಿಂದ ಶೋಭಿಸುವ ಕೊಳಲು ಹಿಡಿದಿದ್ದಾನೆ. ಪ್ರಭಾವಳಿಯ ಇಕ್ಕೆಲಗಳಲ್ಲಿ ಕೈಮುಗಿದು ಕುಳಿತ ಭಕ್ತರೂ ಕೋಲೂರಿ ನಿಂತ ಗೊಲ್ಲರೂ, ಕೊರಳೆತ್ತಿ ನಿಂತ ಗೋವುಗಳೂ ಮೈಮರೆತ ಗೋಪಿಕೆಯರೂ ವೇಣುನಾದವನ್ನು ಆಲಿಸುತ್ತಿದ್ದಾರೆ. ಪ್ರಭಾವಳಿಯ ಅಂಚಿನಲ್ಲಿ ದಶಾವತಾರದ ಚಿತ್ರಣವಿದ್ದರೆ, ಪಾದದೆಡೆಯಲ್ಲಿ ದೇವಿಯರಿದ್ದಾರೆ. ಇಲ್ಲೂ ಪೀಠದ ಕೆಳಭಾಗದಲ್ಲಿ ಗರುಡನನ್ನು ಕಾಣಬಹುದು.

ನಡುವಣ ಗರ್ಭಗುಡಿಯಲ್ಲಿ ಕೇಶವನ ಭವ್ಯವಾದ ಶಿಲ್ಪವಿದೆ. ಬಲ ಮೇಲುಗೈಯಿಂದ ಮೊದಲುಗೊಂಡು ಅನುಕ್ರಮವಾಗಿ ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದಾ ಪದ್ಮಗಳನ್ನು ಧರಿಸಿರುವ ಕೇಶವನ ವಿಗ್ರಹದ ಸುತ್ತ ಕೀರ್ತಿಮುಖವಿರುವ ಪ್ರಭಾವಳಿಯಿದೆ. ವಲ್ಲರಿಗಳಿಂದ ರೂಪಿತವಾದ ಪ್ರಭಾವಳಿಯ ಅಂಚಿನಲ್ಲಿ ದಶಾವತಾರಗಳ ಕೆತ್ತನೆಯಿದೆ. ಪಾದದೆಡೆಯಲ್ಲಿ ಇಕ್ಕೆಲಗಳಲ್ಲಿ ಕಳಶವನ್ನು ಹಿಡಿದ ದೇವಿಯರಿದ್ದಾರೆ.

ನವರಂಗಮಂಟಪದಲ್ಲಿ ಇರಿಸಿರುವ ಶಿಲ್ಪಗಳಲ್ಲಿ ಗಣಪತಿಯ ವಿಗ್ರಹ ಸೊಗಸಾಗಿದೆ. ಪಾಶ ಅಂಕುಶಗಳನ್ನು ಧರಿಸಿ ಕುಳಿತಿರುವ ಭಂಗಿ ಮನ ಸೆಳೆಯುತ್ತದೆ. ಇಲ್ಲಿಯೇ ಮಹಿಷಾಸುರಮರ್ದಿನಿಯ ಶಿಲ್ಪವನ್ನೂ ಶ್ರೀ ವೈಷ್ಣವ ಆಚಾರ್ಯರಾದ ಆಳ್ವಾರರ ಶಿಲ್ಪಗಳನ್ನೂ ನೋಡಬಹುದು.

ಕೆ.ಆರ್. ಪೇಟೆ ತಾಲೂಕಿನ ಭೇರ್ಯದಿಂದ ಎಂಟು ಕಿಮೀ ದೂರದಲ್ಲಿರುವ ಆನೆ ಕನ್ನಂಬಾಡಿಯನ್ನು ನೋಡಲು ಬರುವವರು ಸನಿಹದ ಸಾಲಿಗ್ರಾಮ, ಮಿರ್ಲೆ, ಭೇರ್ಯ, ಕಿಕ್ಕೇರಿ ಮೊದಲಾದ ಊರುಗಳಲ್ಲಿರುವ ಪುರಾತನ ದೇವಾಲಯಗಳನ್ನೂ ದರ್ಶಿಸಬಹುದಾಗಿದೆ.

**ಸೌಜನ್ಯ: ಆಕಾಶವಾಣಿ, ಮೈಸೂರು**



## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

ಅಧ್ಯಾಯ- 20

# ನಾಯಕತ್ವದ ಉತ್ಸಾಹ

ಮಕ್ಬೂಲ್ ಪಟೇಲ್ ಅನಂತಕುಮಾರನನ್ನು ಮೊದಲು ಕಂಡದ್ದು ಆಂಟಿಸ್ಕೂಲಿನಲ್ಲಿ. ಅನಂತನ ತಾಯಿ ಗಿರಿಜಾ ಶಾಸ್ತ್ರಿಯವರು, ಇನ್ನೂ ಶಾಲೆಗೆ ಹೋಗದ ಮಕ್ಕಳಿಗಾಗಿ ನಡೆಸುತ್ತಿದ್ದ ಈ ಪೂರ್ವಪ್ರಾಥಮಿಕ ಶಾಲೆಯಿಂದ ಕಾಲೊನಿಯ ತಾಯಂದಿರಿಗೂ ಬಹು ಪ್ರಯೋಜನವಾಗಿತ್ತು. ಮಕ್ಬೂಲ್ ಪಟೇಲನಂತಹ ಮಕ್ಕಳು ಗಿರಿಜಾ ಶಾಸ್ತ್ರಿಯವರನ್ನು ನೋಡಿ ಭಯಪಟ್ಟುಕೊಂಡು ಗಲಾಟೆಮಾಡದೆ ಸುಮ್ಮನೆ ಕುಳಿತಿರುತ್ತಿದ್ದವು. ಅಷ್ಟೆಲ್ಲ ಮಕ್ಕಳನ್ನು ಗಿರಿಜಾರವರು ಅದು ಹೇಗೆ ಹತೋಟಿಯಲ್ಲಿಟ್ಟುಕೊಳ್ಳುತ್ತಿದ್ದರೋ!

ಆಂಟಿ ಸ್ಕೂಲಿನಲ್ಲಿ ಪ್ರಾರಂಭವಾದ ಅನಂತ-ಮಕ್ಬೂಲರ ಸ್ನೇಹ ನಿರಂತರವಾಗಿ ಮುಂದುವರಿಯಿತು. ಅನಂತನಿಗಿಂತ ಮಕ್ಬೂಲ್ ಒಂದು ತರಗತಿ ಮುಂದಿದ್ದರೂ ಇಬ್ಬರೂ ಒಟ್ಟಿಗೇ ಶಾಲೆಗೆ ಹೋಗುವರು, ಬಾಸೆಲ್ ಮಿಶನ್ ಪ್ರಾಥಮಿಕ ಶಾಲೆಯಲ್ಲಿದ್ದ ಮಕ್ಕಳ ಸಂಖ್ಯೆ ಕಡಿಮೆಯಿದ್ದುದರಿಂದ ಇವರ ಸಹವಾಸ ನಿಕಟವಾಗಿಯೇ ಇತ್ತು.

ರೈಲ್ವೆ ಕಾಲೊನಿಯಲ್ಲಿ ಸ್ಕೌಟ್ ಆಂದೋಲನ ಪ್ರಾರಂಭವಾದಾಗ ಈ ಗೆಳೆಯರೂ ಸ್ಕೌಟ್ ಗುಂಪಿಗೆ ಸೇರಿಕೊಂಡರು. ಸ್ಕೌಟ್ ಚಟುವಟಿಕೆಗಳು ಈ ಮಿತ್ರರನ್ನು ಬಹುವಾಗಿ ಆಕರ್ಷಿಸಿದವು. ಆಲಮಟ್ಟಿ, ಗೋವಾ ಮತ್ತಿತರ ಕಡೆಗಳಿಗೆ ಪ್ರವಾಸ ಹೋಗಿ ಬರುವ ಅವಕಾಶವೂ ಸಿಕ್ಕಿತು. ಕಾಡಿನಲ್ಲಿ ಚಾರಣ, ಅಡುಗೆ ಮಾಡುವುದು ಮತ್ತಿತರ ಚಟುವಟಿಕೆಗಳೆಲ್ಲ ಬಲು ಇಷ್ಟವೆನಿಸಿದವು.

ಹುಬ್ಬಳ್ಳಿಯಲ್ಲಿದ್ದ ಸ್ಕೌಟ್ ಗುಂಪುಗಳಲ್ಲಿ ಒಂದರ ನಾಯಕತ್ವ ಅನಂತಕುಮಾರನಿಗೆ ಲಭಿಸಿದ್ದರೆ, ಎಲ್ಲ ಗುಂಪುಗಳ ಮೇಲ್ವಿಚಾರಣೆಯನ್ನು ಮಕ್ಬೂಲನಿಗೆ ವಹಿಸಲಾಗಿತ್ತು. ವಿವಿಧ ಚಟುವಟಿಕೆಗಳಿಗೆ ಬೇಕಾಗುವ ಸಾಧನಗಳನ್ನು ಹೊಂದಿಸಿಕೊಳ್ಳುವಂತೆ ಆಯಾ ಗುಂಪಿನ ನಾಯಕರಿಗೆ ಸೂಚನೆಕೊಡಲಾಗುತ್ತಿತ್ತು. ಅನಂತಕುಮಾರ ಆಯಾ ಚಟುವಟಿಕೆಯನ್ನು ನಿರ್ವಹಿಸಬೇಕಾದ ಸಂದರ್ಭದಲ್ಲಿ ತನ್ನ ಗುಂಪಿಗೆ ಬೇಕಾದ ಹಗ್ಗವನ್ನೋ ಮತ್ತೇನೋ ವಸ್ತುವನ್ನೋ ಇನ್ನೊಂದು ಗುಂಪಿನವರಿಂದ ಎತ್ತಿಕೊಂಡೇ ಬಂದುಬಿಡುವನು. ಹಾಗೆ ಕಸಿದುಕೊಂಡು ಬರುವುದು ಸ್ಕೌಟ್ ನಿಯಮಕ್ಕೆ ವಿರುದ್ಧ ಹೌದೋ ಅಲ್ಲವೋ ಎಂಬುದಕ್ಕಿಂತ ತನ್ನ ಗುಂಪಿನ ಚಟುವಟಿಕೆ ಸಾಂಗವಾಗಿ ನಡೆಯಬೇಕೆನ್ನುವುದಷ್ಟೇ ಅನಂತನ ಗುರಿ. ಎಂಟಿಎಸ್ ಕಾಲೊನಿಯಲ್ಲಿ ಸ್ಕೌಟ್ ಚಟುವಟಿಕೆ ಪ್ರಾರಂಭಗೊಂಡ ಮಾರನೆಯ ವರ್ಷವೇ ಅನಂತಕುಮಾರನ ತಂಡಕ್ಕೆ ಟೆಂಟ್ ನಿರ್ಮಾಣ, ಧ್ವಜಾರೋಹಣ ಮತ್ತಿತರ ಸ್ಪರ್ಧೆಗಳಲ್ಲಿ ಗೆಲುವು ದೊರೆತು ಅತ್ಯುತ್ತಮ ತಂಡವೆಂಬ ಪ್ರಶಸ್ತಿ ಗಳಿಕೆಯಾದುದೊಂದು ವಿಶೇಷ. ಸ್ಕೌಟ್ ತಂಡದಲ್ಲಿರಲಿ, ಎಂಟಿಎಸ್ ಕಾಲೊನಿಯ ಬಯಲಿನಲ್ಲಿರಲಿ, ಬಾಸೆಲ್ ಮಿಶನ್ ಶಾಲೆಯಲ್ಲೇ ಇರಲಿ



ಅನಂತಕುಮಾರ ತನ್ನ ಸುತ್ತಲಿನ ಗುಂಪಿನ ಗಮನಸೆಳೆಯುವ ಕೇಂದ್ರಸ್ಥಾನದಲ್ಲಿರುವನು. ವಿನೋದಪರತೆ, ಲವಲವಿಕೆ, ಜೀವನೋಲ್ಲಾಸಗಳ ಚಿಲುಮೆಯಾಗಿರುವನು. ತಾನೂ ಹಸನ್ಮುಖವಾಗಿರುವುದಲ್ಲದೆ ಸುತ್ತಲಿನವರನ್ನು ಉಲ್ಲಾಸದಿಂದಿರುವಂತೆ ಪ್ರೇರಿಸುವುದೇ ಅವನ ನಿರಂತರ ಪ್ರಯತ್ನ. ಈ ಲವಲವಿಕೆ ಉಳಿದವರಿಗೆ ಸಂತಸ ತಂದೀತೇ ಹೊರತು ಶಿಕ್ಷಕರಿಗಲ್ಲ. ತರಗತಿಯ ಗಾಂಭೀರ್ಯಕ್ಕೆ ಭಂಗತರುವ ಅನಂತಕುಮಾರನ ಸ್ವಭಾವ ಅವರಿಗೆ ಸಹ್ಯವಾಗುತ್ತಿರಲಿಲ್ಲ. ಹೀಗಾಗಿ ಅನಂತಕುಮಾರನ ವಿನೋದಪ್ರಿಯತೆ, ಲವಲವಿಕೆಗಳು ಶಾಲೆಯೊಳಗೆ ತುಂಟತನದ ಹಣೆಪಟ್ಟಿ ಹೊತ್ತುಕೊಂಡವು. ಸದಾ ಜೊತೆಯಲ್ಲಿರುತ್ತಿದ್ದ ಮಕ್ಬೂಲ್ ಪಟೇಲನನ್ನು ದೂರ ಕೂರಿಸುವುದು, ಅನಂತಕುಮಾರನೊಬ್ಬನನ್ನೇ ಎಲ್ಲರಿಂದ ಪ್ರತ್ಯೇಕವಾಗಿ ಕೂರಿಸುವುದು ಮೊದಲಾದ ಪ್ರಯೋಗಗಳು ನಿರಂತರವಾಗಿ ನಡೆಯುತ್ತಿದ್ದವು. ಇದರಿಂದ ಅನಂತಕುಮಾರನೇನೂ ವಿಚಲಿತನಾಗಲಿಲ್ಲ. ಆತನ ಸ್ವಭಾವವೂ ಬದಲಾಗಲಿಲ್ಲ.

ಹಾಗೆಂದು ಅನಂತಕುಮಾರನನ್ನು ಶಿಕ್ಷಕರು ತಿರಸ್ಕಾರದಿಂದ ಕಾಣುತ್ತಿದ್ದರೆಂದು ಅರ್ಥವಲ್ಲ. ಆತನ ಸಭ್ಯತೆ, ಪ್ರಾಮಾಣಿಕತೆ, ಕಾರ್ಯದ ಅಚ್ಚುಕಟ್ಟು ಎಲ್ಲವೂ ಉಪಾಧ್ಯಾಯರಿಗೆ ಇಷ್ಟವಾಗಿದ್ದವು. ತಮಗಾಗಿ ಹೊರಗಿನಿಂದ ಚಹಾ, ಮತ್ತಿತರ ಅಗತ್ಯವಸ್ತು ಏನಾದರೂ ತರಬೇಕೆಂದರೆ ಶಿಕ್ಷಕರು ಅನಂತಕುಮಾರನನ್ನೇ ಕರೆದು ಮಕ್ಬೂಲನೊಡನೆ ಕಳುಹಿಸುತ್ತಿದ್ದರು. ಹಣ ಕೊಟ್ಟು ಕಳುಹಿಸಬೇಕೆಂದರೆ ವ್ಯವಹಾರಜ್ಞಾನದೊಡನೆ ಪ್ರಾಮಾಣಿಕತೆಯನ್ನೂ ಪರಿಗಣಿಸಬೇಕಲ್ಲ! ಪುಟ 4 ರಲ್ಲಿ ಮುಂದುವರೆದಿದೆ

# ಅದಮ್ಯ ಚೇತನ ನಿತ್ಯ ಅನ್ನ ದಾಸೋಹಕ್ಕೆ ರಾಮಭಕ್ತರ ಅಭಿನಂದನೆ





ಅಯೋಧ್ಯೆಯಲ್ಲಿ ರಾಮಲಲ್ಲಾ ಪ್ರಾಣಪ್ರತಿಷ್ಠಾಪನೆಯ (2024ರ ಜ.22) ದಿನದಿಂದ ಅದಮ್ಯ ಚೇತನ ಸಂಸ್ಥೆಯ "ನಿತ್ಯ ಅನ್ನದಾಸೋಹ"ವು ರಾಮಭಕ್ತರ ಪ್ರಶಂಸೆಗೆ ಪಾತ್ರವಾಗುತ್ತಿದೆ.

ದಿನನಿತ್ಯವೂ ಒಂದು ಸಾವಿರ ಭಕ್ತರಿಗೆ ಅನ್ನ ದಾಸೋಹ ಕೈಗೊಂಡಿರುವ ಸಂಸ್ಥೆಯು, ಬೆಳಗಿನ ಉಪಾಹಾರವಾಗಿ ಇಡ್ಲಿ, ಸಾಂಬಾರು, ಮಧ್ಯಾಹ್ನ ಸಾವಯವ ಬೆಲ್ಲ ಬಳಸಿದ ಒಂದು ಸಿಹಿಯೊಂದಿಗೆ (ಅಕ್ಕಿ ಪಾಯಸ, ಕಡಲೆಬೇಳೆ ಪಾಯಸ, ರವೆ ಪಾಯಸ, ಪೊಂಗಲ್ ಇತ್ಯಾದಿ) ಅನ್ನ-ಸಾಂಬಾರು, ಬಿಸಿಬೇಳೆಬಾತ್ ಹಾಗೂ ರಾತ್ರಿ ಊಟಕ್ಕಾಗಿ ಅನ್ನ-ಸಾಂಬಾರು, ಖಾರಾಪೊಂಗಲ್ ಹೀಗೆ...... ದಿನದ 24ಗಂಟೆಯೂ ಸೇವಾನಿರತವಾಗಿದೆ. ದೇಶದ ವಿವಿಧೆಡೆಯಿಂದ ಬರುತ್ತಿರುವ ರಾಮಭಕ್ತರು ಅದಮ್ಯ ಚೇತನದ "ಅನ್ನದಾಸೋಹ" ಸೇವೆಯನ್ನು ಅಭಿನಂದಿಸುತ್ತಿದ್ದಾರೆ. ಸಂಸ್ಥೆಯ ಸೇವೆಯನ್ನು ಪ್ರಶಂಸಿಸಿ ರಾಮಕೃಷ್ಣ ಆಶ್ರಮದ ಸಿಬ್ಬಂದಿಯೂ ಸಹ ಅದಮ್ಯ ಚೇತನದ ನಿತ್ಯ ಅನ್ನ ದಾಸೋಹ ಕೇಂದ್ರದಲ್ಲಿ ಸೇವಾನಿರತರಾಗಿದ್ದಾರೆ. ದಕ್ಷಿಣ ಭಾರತದ ವಿಶೇಷ ತಿಂಡಿ-ಊಟದ ಸ್ವಾದವನ್ನು ರಾಮಭಕ್ತರು ಸಂಭ್ರಮಿಸುತ್ತಿದ್ದಾರೆ.



# ವೃತ್ತಿ ಶಿಕ್ಷಣ: ಕ್ಯಾಪಿಟೇಷನ್ ಪಿಡುಗು

**ರಾಜ್ಯದಲ್ಲಿ ವೃತ್ತಿ ಶಿಕ್ಷಣ ಸಂಸ್ಥೆಗಳ ಬೆಳವಣಿಗೆ: ಇಂಜಿನಿಯರಿಂಗ್ ಕಾಲೇಜುಗಳು (ಕರಾಳಪತ್ರದಲ್ಲಿ ನಮೂದಾಗಿರುವ ಅಂಕಿಅಂಶಗಳನ್ನು 1980ರಲ್ಲಿದ್ದಂತೆ ಪರಿಗಣಿಸಬೇಕಾಗಿ ಕೋರಿದೆ- ಸಂ)**




**ಅಧ್ಯಾಯ-1**

1956-57ರಲ್ಲಿ, ಒಟ್ಟು 6 ಇಂಜಿನಿಯರಿಂಗ್ ಕಾಲೇಜುಗಳಿದ್ದರೆ ಅದು 1986-87ರ ಹೊತ್ತಿಗೆ 50ಕ್ಕೇರಿತು. 17 ಕಾಲೇಜುಗಳು ಅರ್ಜಿಗಳು ಸರ್ಕಾರದ ಒಪ್ಪಿಗೆಗಾಗಿ ಕಾದಿದ್ದವು. ಅದೇ ರೀತಿ, 1956-57ರಲ್ಲಿ ಕೇವಲ ಮೂರು ವೈದ್ಯಕೀಯ ಕಾಲೇಜುಗಳಿದ್ದರೆ 1985-86ರ ಹೊತ್ತಿಗೆ ಈ ಸಂಖ್ಯೆ 18ಕ್ಕೇರಿತು. 16 ಅರ್ಜಿಗಳು ಸರ್ಕಾರದ ಒಪ್ಪಿಗೆಗೆ ಕಾದಿದ್ದವು. 1980ರಲ್ಲಿ, ಕರ್ನಾಟಕ ರಾಜ್ಯ ಸರ್ಕಾರ ನಡೆಸಿದ ಸರ್ವೇಕ್ಷಣೆಯ ಪ್ರಕಾರ, ಇಂಜಿನಿಯರಿಂಗ್ ವೈದ್ಯಕೀಯ ಮತ್ತು, ಪಾಲಿಟೆಕ್ನಿಕ್ ಪದವೀಧರರ ಅವಶ್ಯಕತೆ 1978-79ರಿಂದ 1982-83 ರವರೆಗೆ ಪ್ರತಿ ಸಾಲಿಗೆ ಕ್ರಮವಾಗಿ 1140, 300 ಮತ್ತು 840 ಆಗಿರುತ್ತದೆ.

ಸದ್ಯಕ್ಕೆ, ಈ ರೀತಿಯ ಸ್ಫೋಟದಿಂದ ಒಳಬರುತ್ತಿರುವ ಮತ್ತು ಹೊರ ಹೊಮ್ಮುತ್ತಿರುವ ಸಂಖ್ಯೆ ಕೆಳಗಿನಂತಿದೆ: 1978-79ರಲ್ಲಿ, ಸರಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಸೇರಿ 16 ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಟ್ಟು 4272 ಸೀಟುಗಳಿದ್ದವು. 1986-87ರ ಹೊತ್ತಿಗೆ, 50 ಕಾಲೇಜುಗಳಾಗಿ, ಸೀಟುಗಳು 14,619ಕ್ಕೇರಿಕೆಯಾಯಿತು. 1979-80ರಲ್ಲಿರುವ, 10 ವೈದ್ಯಕೀಯ ಕಾಲೇಜುಗಳಲ್ಲಿ ಒಟ್ಟು1120 ಸೀಟುಗಳಿದ್ದವು. 1986-87ರ ಹೊತ್ತಿಗೆ, 13 ಕಾಲೇಜುಗಳಾಗಿ, ಸೀಟುಗಳ ಸಂಖ್ಯೆ1679ಕ್ಕೇರಿತು. 1978-79ರಲ್ಲಿ, ಒಟ್ಟು 33 ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ 4396 ಸೀಟುಗಳಿದ್ದವು. 1986-87ರಲ್ಲಿ ಕಾಲೇಜುಗಳ ಸಂಖ್ಯೆ 157ಕ್ಕೇರಿತು ಮತ್ತು ಸೀಟುಗಳ ಸಂಖ್ಯೆ 21,856ಕ್ಕೇರಿತು. ಇನ್ನೂ, 25 ಸಂಸ್ಥೆಗಳಿಗೆ ಪಾಲಿಟೆಕ್ನಿಕ್ ಕಾಲೇಜುಗಳನ್ನು ಆರಂಭಿಸಲು ಸರ್ಕಾರ ಅನುಮತಿಯನ್ನಿತ್ತಿದೆ.

ಪ್ರಸ್ತುತ, (1980) ಪ್ರತಿ ವರ್ಷ ಹೊರಬರುತ್ತಿರುವ ತಾಂತ್ರಿಕ, ವೈದ್ಯಕೀಯ, ಡಿಪ್ಲೋಮಾ ಪದವೀಧರರ ಸಂಖ್ಯೆ; (1) ಇಂಜಿನಿಯರಿಂಗ್ ಪದವೀಧರರು: 7500 (ಸುಮಾರು) ಇಡೀ ದೇಶದ ಇಂಜಿನಿಯರಿಂಗ್ ಪದವೀಧರರ ಶೇ.40. (2) ವೈದ್ಯಕೀಯ ಪದವೀಧರರು - 795 (3) ಡಿಪ್ಲೋಮಾದಾರರು - 5124 ಮೇಲಿನ ಅಂಕಿ-ಅಂಶಗಳು ನಮ್ಮ ಅವಶ್ಯಕತೆಗಳು ಮತ್ತು ಪೂರೈಕೆಯ ನಡುವಿರುವ ಅಂತರವನ್ನು ಚಿತ್ರಿಸುತ್ತವೆ.

ತಾಂತ್ರಿಕ ಮಾನವಶಕ್ತಿ ಬಗ್ಗೆ 1980ರಲ್ಲಿ ರಾಜ್ಯ ಸರ್ಕಾರ ನಡೆಸಿದ ಸರ್ವೇಕ್ಷಣೆಯ ನಂತರ ಕೇವಲ 6 ವರ್ಷಗಳಲ್ಲಿ ಈ ಅಗತ್ಯ ಇಷ್ಟೊಂದು ಹೆಚ್ಚಾಗಿರಲು ಸಾಧ್ಯವಿಲ್ಲ. 1980ರಂಥದೇ ಮತ್ತೊಂದು ಸರ್ವೇಕ್ಷಣೆಯನ್ನು ಈಗ ನಡೆಸಬೇಕಾದುದೂ ಅವಶ್ಯವೇ ಆಗಿದೆ. ಪ್ರತಿಭೆ ರಪ್ತಿನ ಉತ್ಸಾಹ ತೋರುವ ಮುಖ್ಯಮಂತ್ರಿಗಳು, ರಾಜ್ಯದ ಈ ಮೂಲಭೂತ ಅವಶ್ಯಕತೆಗೂ ಸ್ಪಷ್ಟ ಯೋಜನೆಗಾಗಿ ಗಮನ ವಹಿಸಬೇಕಷ್ಟೆ? 1983ರಲ್ಲಿ, ಉದ್ಯೋಗ ವಿನಿಮಯ ಕಛೇರಿಗಳ ಜೀವಂತ ದಾಖಲೆಗಳ ಪ್ರಕಾರ, ರಾಜ್ಯದಲ್ಲಿ 2850 ನಿರುದ್ಯೋಗಿ ಇಂಜಿನಿಯರಿಂಗ್ ಪದವೀಧರರಿದ್ದರು. ಇಂಜಿನಿಯರಿಂಗ್ ಶಿಕ್ಷಣ ತಜ್ಞ ಡಾ|| ಎಲ್. ಎಸ್. ಚಂದ್ರಕಾಂತ್, ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ಸ್ಫೋಟ ಎಂಬ ವರದಿ"( Engineering Education Explosion in Karnataka) ಯನ್ನು ಕೆಲ ವರ್ಷಗಳ ಹಿಂದೆ ಪ್ರಕಟಿಸಿದ್ದಾರೆ. ಆ ವರದಿಯಲ್ಲಿ, ಪ್ರತಿ ವರ್ಷ ಹೊರಬರುವ ಇಂಜಿನಿಯರಿಂಗ್ ಪದವೀಧರರಲ್ಲಿ ಶೇ. 30ರಷ್ಟು ಜನ ನಿರುದ್ಯೋಗಿಗಳಾಗುತ್ತಾರೆಂದು ಅವರು ಹೇಳಿದ್ದಾರೆ. 1983-84ರಲ್ಲಿ, ಒಮ್ಮೆಲೆ 12,000 ಪದವೀಧರರು ಹೊರಹೊಮ್ಮಿದರು. (ಐದು ಮತ್ತು ನಾಲ್ಕು ವರ್ಷದ ಇಂಜಿನಿಯರಿಂಗ್ ಕೋರ್ಸ್‌ಗಳು ಒಟ್ಟಿಗೆ ಮುಗಿದಿದ್ದರ ಅಪೂರ್ವ ಫಲಿತಾಂಶ) ಈ ಸಂದರ್ಭದಲ್ಲಿ ಡಾ|| ಚಂದ್ರಕಾಂತ್ ನುಡಿದರು. ''No responsible government should feel comfortabale both politically and socially at this state of affairs''. ಇದು ನಾಲ್ಕು ವರ್ಷದ ಹಿಂದಿನ ಸ್ಥಿತಿ.

ಜುಲೈ 1986ರಲ್ಲಿ, ರಾಜ್ಯ ಸರ್ಕಾರ ಇಂಜಿನಿಯರಿಂಗ್ ವಿದ್ಯಾಲಯಗಳ ಆರಂಭದ ಸಲುವಾಗಿ ತನ್ನ ಮುಂದಿದ್ದ 17 ಅರ್ಜಿಗಳ ಪರಿಶೀಲನೆಗಾಗಿ ಸಮಿತಿಯೊಂದನ್ನು ನೇಮಿಸಿತು. ಈ ಸಮಿತಿಯ ವರದಿಯ ಪ್ರಕಾರ, "ರಾಜ್ಯದಲ್ಲಿರುವ ಸರ್ಕಾರಿ-ಸರ್ಕಾರೇತರ ಸಂಸ್ಥೆಗಳಲ್ಲಿರುವ ಉದ್ಯೋಗಾವಕಾಶ ಹೆಚ್ಚೆಂದರೆ ವರ್ಷಕ್ಕೆ 3000-3500ನ್ನೂ ಮೀರಲಾರದು. ಆದ್ದರಿಂದ, ರಾಜ್ಯದಲ್ಲಿ ಈಗಾಗಲೇ 7ನೇ ಪಂಚವಾರ್ಷಿಕ ಯೋಜನೆಯ ಅಂತ್ಯ (1990) ದವರೆಗೆ ಇಂಜಿನಿಯರುಗಳನ್ನು ಪೂರೈಸಬಲ್ಲಷ್ಟು ಕಾಲೇಜುಗಳಿದ್ದಾವೆಂಬುದು ಸ್ಪಷ್ಟ. ರಾಜ್ಯದಲ್ಲಿ ಪ್ರತಿವರ್ಷ ಹೊರಬರುವ ಸುಮಾರು 7500ರಷ್ಟು ಹೊಸ ಬಿ.ಇ. ಪದವೀಧರರ ಪೈಕಿ, ಅರ್ಧದಷ್ಟಾದರೂ ಜನಕ್ಕೆ ರಾಜ್ಯದಲ್ಲಿಯೇ ಕೆಲಸ ಕೊಡಬೇಕಾದ ಸನ್ನಿವೇಶ ಈಗಾಗಲೇ ಉದ್ಭವಿಸಿದೆ." 1983ರಲ್ಲಿ, ಜನತಾ ಪಕ್ಷದ ಸರಕಾರ ಆಳ್ವಿಕೆಗೆ ಬಂದ ಹೊಸದಲ್ಲಿ ತಾಂತ್ರಿಕ ಶಿಕ್ಷಣದ ಬಗ್ಗೆ ಪ್ರಕಟಿಸಿದ ಶ್ವೇತಪತ್ರದಲ್ಲಿ ಮೇಲಿನಂಶಗಳ ಬಗ್ಗೆ ನಿರ್ಣಯ ರೂಪಿಸುವವರಿಗೆ ಸ್ಪಷ್ಟ ಮುನ್ನೆಚ್ಚರಿಕೆ ಇತ್ತು. ಈ ಮುನ್ನೆಚ್ಚರಿಕೆ ನುಡಿಗಳನ್ನು ಧನದಾಹೀ ರಾಜಕಾರಣಿಗಳು ಕಡೆಗಣಿಸಿ, ಶಿಕ್ಷಣವನ್ನು ಮಾರಾಟದ ಮಳಿಗೆಯನ್ನಾಗಿಸಿದ್ದಾರೆ. (C ) With the addition of new Engineering Colleges and increase in intake from 1979-80 onwards and with two batches of Engineering students coming out of the University at the same time in 1983-84, the cumulative surplus (Supply minus demand) of Engineering personnel in 1984-85 is expected to be over 17,000 (which includes students not belonging to Karnataka State). With the present level of intake the out turn of graduates coming out in the whole Country which is around 20,000 today. The number of unemployed exchange which stands around 2,850 now will swell enormously in the coming years (White paper on Professional Colleges and Institutions, 1983, Page-6) *ಈಗ ರಾಜ್ಯದಲ್ಲಿ 1113 ಪದವೀಧರ ನಿರುದ್ಯೋಗಿ ವೈದ್ಯರಿದ್ದಾರೆ ಎಂದು 12-2-1987 ರಂದು ಆರೋಗ್ಯ ಸಚಿವ ಶ್ರೀ ಹೆಚ್.ಬಿ. ಕೃಷ್ಣಪ್ಪನವರು ಸದನದಲ್ಲಿ ಹೇಳಿಕೆ ನೀಡಿದ್ದಾರೆ. *ಶ್ರೀ ದೇವರಾಜ ಅರಸು, ಗುಂಡೂರಾವ್ ಕಾಲದಲ್ಲಿ ಆರಂಭವಾದ ವೈದ್ಯಕೀಯ ಕಾಲೇಜುಗಳಿಗೂ, ರಾಮಕೃಷ್ಣ ಹೆಗಡೆಯವರು ಅನುಮತಿಯಿತ್ತಿರುವ 5 ವೈದ್ಯಕೀಯ ಮಹಾವಿದ್ಯಾಲಯಗಳಿಗೂ, ಭಾರತೀಯ ವೈದ್ಯಕೀಯ ಮಂಡಳಿ (Medical Council of Indian) ಯ ಮನ್ನಣೆ ಇನ್ನೂ ಸಿಕ್ಕಿಲ್ಲವೆಂಬುದು ಗಮನಾರ್ಹ. *ಇತ್ತೀಚೆಗೆ ರಾಜ್ಯದ 13 ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿನ ಒಟ್ಟು ಸೀಟುಗಳಿಗೆ ಇನ್ನೂ 140 ಸೀಟುಗಳ ಪ್ರವೇಶಾವಕಾಶ ಹೆಚ್ಚಳವನ್ನು ರಾಜ್ಯ ಸರ್ಕಾರ ಘೋಷಿಸಿದೆ. ಇವೆಲ್ಲವೂ ಕ್ಯಾಪಿಟೇಶನ್ ಆಧಾರಿತ.

ಮುಂದುವರಿಯುವುದು

## ಅನಂತಯಾನ ನಾಯಕತ್ವದ ಉತ್ಸಾಹ

ಪುಟ 5 ರಿಂದ ಬಾಸೆಲ್ ಮಿಶನ್ ಶಾಲೆಯಲ್ಲಿ ಇದ್ದ ಸುಜ್ಞಾನಮ್ಮ, ಕಾತರಕಿ ಮೊದಲಾದ ಶಿಕ್ಷಕಿಯರು ಬಹು ಪ್ರೀತಿ, ಆತ್ಮೀಯತೆಗಳಿಂದ ವಿದ್ಯಾರ್ಥಿಗಳನ್ನು ನೋಡಿಕೊಳ್ಳುವರು. ಅಲ್ಲಿಯ ವ್ಯವಸ್ಥಾಪಕರು ತಮ್ಮ ಶಾಲೆಯಲ್ಲಿ ಚೆನ್ನಾಗಿ ಓದುತ್ತಿದ್ದ ಕೆಲವು ಹಿಂದೂ ಮಕ್ಕಳನ್ನು ಆಯ್ಕೆಮಾಡಿಕೊಂಡು ಅವರಿಗೆ ಕನ್ನಡದ ಬೈಬಲ್ ಸುವಾರ್ತೆಯ ಭಾಗಗಳನ್ನು ಹೇಳಿಕೊಡುತ್ತಿದ್ದರು. ಆ ಮಕ್ಕಳಿಂದ ಕ್ರಿಸ್ಮಸ್ ದಿವಸ ಈ ಸುವಾರ್ತೆಯನ್ನು ಓದಿಸುತ್ತಿದ್ದರು. ಅನಂತಕುಮಾರನೂ ಅವನ ತಮ್ಮ ನಂದಕುಮಾರನೂ ಈ ಗುಂಪಿನಲ್ಲಿ ಸೇರಿದ್ದು ಪ್ರತಿವರ್ಷ ಕ್ರಿಸ್ ಮಸ್ ಅವಧಿಯಲ್ಲಿ ಬೈಬಲ್ ಓದಲು ಹೋಗುತ್ತಿದ್ದರು.

ಅನಂತಕುಮಾರನಿಗೆ ಪ್ರಾಥಮಿಕ ಶಾಲೆಯಲ್ಲಿ ಪಾಠ ಹೇಳುತ್ತಿದ್ದ ಶಿಕ್ಷಕಿಯೊಬ್ಬರಿಗೆ ಪರೀಕ್ಷೆಯಲ್ಲಿ ತಮ್ಮ ಆಯ್ಕೆಯ ಹುಡುಗಿಯೊಬ್ಬಳಿಗೆ ಎಲ್ಲರಿಗಿಂತ ಹೆಚ್ಚು ಅಂಕ ಕೊಡುವ ಮನಸ್ಸಿತ್ತು. ಆ ಹುಡುಗಿಗೆ ತರಗತಿಯಲ್ಲಿ ಪ್ರತಿಸ್ಪರ್ಧಿ ಎನಿಸಬಹುದಾದ ಜಾಣ ಅನಂತಕುಮಾರನೇ. ಅವನಿಗೆ ಅಂಕ ಕಡಿಮೆಯಾಗಲೆಂದೋ ಏನೋ, ಶಿಕ್ಷಕಿ ಇವನಿಗೆ ಮೌಖಿಕ ಪರೀಕ್ಷೆಯಲ್ಲಿ ಕಠಿಣವಾದ ಪ್ರಶ್ನೆಗಳನ್ನು ಕೇಳತೊಡಗಿದರಂತೆ. ಆ ಸಂದರ್ಭದಲ್ಲಿ ಜ್ವರದಿಂದ ನರಳುತ್ತಿದ್ದರೂ ಅನಂತ ಎಲ್ಲದಕ್ಕೂ ಪಟಪಟನೆ ಉತ್ತರಿಸಿದ, ಕೊನೆಗೆ ಶಿಕ್ಷಕಿ ಮೂರನೇ ತರಗತಿಯ ಈ ಹುಡುಗನಿಗೆ ಔರಂಗಜೇಬನ ತಾಯಿಯ ಹೆಸರೇನು ಎಂದು ಪಠ್ಯದಲ್ಲಿ ಇಲ್ಲದ ಪ್ರಶ್ನೆಯೊಂದನ್ನು ಕೇಳಿದರು. ಸಾಮಾನ್ಯಜ್ಞಾನ, ನೆನಪಿನ ಶಕ್ತಿ ಅಗಾಧವಾಗಿದ್ದ ಅನಂತ , ಮಮ್ತಾಜಳ ಹೆಸರು ಹೇಳಿಯೇಬಿಟ್ಟ. ಅನಂತನ ತುಂಟತನದ ಬಗೆಗೆ ಮಾತ್ರ ಸದಾ ದೂರು ಹೇಳುತ್ತಲೇ ಇದ್ದ ಆ ಶಿಕ್ಷಕಿ ಕೊನೆಗೆ ಬೇರೇನೋ ನೆಪ ಹೇಳಿಕೊಂಡು, ಅನಂತನಿಗೆ ಒಂದೋ ಎರಡೋ ಅಂಕ ಕಡಿಮೆ ಕೊಟ್ಟು ಸಾಗಹಾಕಿದರಂತೆ.

ಮುಂದುವರಿಯುವುದು

# ಭಾರತೀಯ ದೇವಾಲಯಗಳ ವಾಸ್ತುಶಿಲ್ಪದ ಉಗಮ ಮತ್ತು ವಿಕಾಸ

ಸನಾತನವಾದ ನಮ್ಮ ಸಂಸ್ಕೃತಿ, ಕಲೆ, ವಿಜ್ಞಾನ, ಜೀವನವಿಧಾನ ಹೀಗೆ ಪ್ರತಿಯೊಂದರ ಮೂಲವೂ ನಮ್ಮ ವೇದಗಳಲ್ಲಿ, ವೈದಿಕ ಸಾಹಿತ್ಯ, ಸಂಸ್ಕೃತಿಗಳಲ್ಲಿದೆ. ವೈದಿಕ ಎಂದರೆ ಬ್ರಾಹ್ಮಣರಿಗೆ ಸಂಬಂಧಿಸಿದ್ದು ಎಂದು ನೋಡುವುದು ಸಂಕುಚಿತ ದೃಷ್ಟಿ. ಬ್ರಾಹ್ಮಣ ಎಂಬ ಶಬ್ದವೇ ವಿಶಾಲವಾದ ಅರ್ಥವನ್ನು ಹೊಂದಿದೆ. ಬ್ರಹ್ಮ ಅಂದರೆ, ಅತ್ಯಂತ ದೊಡ್ಡದು, ಅತ್ಯಂತ ವಿಶಾಲವಾದದ್ದು. ಗಾಂಭೀರ್ಯವುಳ್ಳದ್ದು. ಯಾವುದು ಬ್ರಹ್ಮದೊಂದಿಗೆ ಸೇರಿಕೊಂಡಿದೆಯೋ ಅದನ್ನು "ಬ್ರಾಹ್ಮಣ" ಎನ್ನಬೇಕೇ ವಿನಃ ಅದು ಯಾವುದೇ ಜಾತಿ, ವರ್ಣಕ್ಕೆ ಸಂಬಂಧಿಸಿದ್ದಲ್ಲ. ಬ್ರಹ್ಮ ಅಂದರೆ ಪರಮೋಚ್ಚ, ಎಲ್ಲಕಡೆಯೂ ವ್ಯಾಪಿಸಿರುವುದು, ಎಲ್ಲವನ್ನೂ ಒಳಗೊಂಡಿರುವುದು.

ಸಾರ್ವತ್ರಿಕವಾದದ್ದೆಲ್ಲವೂ ಭಾರತೀಯ ಮತ್ತು ಭಾರತೀಯವಾಗಿದ್ದೆಲ್ಲವೂ ಸಾರ್ವತ್ರಿಕ ಎಂಬ ಎರಡೂ ಹೇಳಿಕೆಗಳು ನಿಜ. ಆದರೆ ಬೇರೆ ಸಂಸ್ಕೃತಿಗಳ, ನಾಗರಿಕತೆಗಳ ಬಗ್ಗೆ ಹೀಗೆಯೇ ಹೇಳಲಾಗದು. ವೈದಿಕ ಸಾಹಿತ್ಯವು ಅನೇಕ ವಿಷಯಗಳನ್ನು ತಿಳಿಸುತ್ತವೆ. ದೇವಾಲಯಗಳು, ಅವುಗಳ ರಚನೆ, ವಾಸ್ತುಶಿಲ್ಪ, ಪರಿಕಲ್ಪನೆ, ವಿಕಾಸ, ವಿಗ್ರಹಗಳು ಎಲ್ಲವುಗಳ ಮೂಲ ವೇದಗಳಲ್ಲಿದೆ. "ವೈದಿಕ ಆರಾಧನೆಗೂ ದೇವಾಲಯಗಳಿಗೂ ಸಂಬಂಧವಿಲ್ಲ, ವೈದಿಕ ದೇವತೆಗಳಿಗೆ ಆಕಾರವಿಲ್ಲ" ಎನ್ನುವುದು ಅರ್ಥಹೀನ.

ವೇದಗಳಲ್ಲಿ ಬಹಳಷ್ಟು ದೇವತೆಗಳ ಲಕ್ಷಣಗಳ ನಿರೂಪಣೆಯಿದೆ. "ಅಧಿಭೂತ" - ಭೌತಿಕ ಶಕ್ತಿಗಳಾದ ವಾಯು, ಆಪೋದೇವಿ, ಅಂತರಿಕ್ಷ, ಸೂರ್ಯ, ಅಗ್ನಿ ಹೀಗೆ ಹಲವಾರು ದೇವತೆಗಳು. ನಾವು ನಮ್ಮ ಶಾಲಾದಿನಗಳಲ್ಲಿ ಕಲಿತ ದೇವರು...ಪ್ರತಿಮೆ... ಇತ್ಯಾದಿಗಳು ಇಂದು ಆಂಗ್ಲಭಾಷೆಯಲ್ಲಿ ತಮ್ಮ ಮೂಲ ಅರ್ಥಗಳನ್ನು ಕಳೆದುಕೊಂಡು ಬಳಕೆಯಲ್ಲಿವೆ.

ಅಧಿಭೂತ ವಾಸ್ತವವಾದರೆ ಇಂದ್ರ, ರುದ್ರ, ಇತ್ಯಾದಿ ದೇವತೆಗಳು ಅಧಿದೈವ. ಈ ದೇವತೆಗಳಿಗೆ ಆಕಾರವಿದೆ. ಸುಂದರನಾದ ಇಂದ್ರ, ದೃಢಕಾಯ, ಆಕರ್ಷಕ, ಕೈಯಲ್ಲಿ ಆಯುಧಗಳನ್ನು ಧರಿಸಿದವನು ರುದ್ರ, ಕಮಲದ ಹಾರಗಳನ್ನು ಧರಿಸಿರುವ ಸುಂದರ ಅಶ್ವಿನಿ ದೇವತೆಗಳು, ಅರುಣೋದಯದಲ್ಲಿ ಕಾಣಿಸಿಕೊಳ್ಳುವ ಉಷೆ - ಹೀಗೆ ಪ್ರತಿಯೊಂದು ದೇವತೆಗೂ ಕೆಲವು ಗುಣಲಕ್ಷಣಗಳಿವೆ. ಪರಮಸತ್ಯಕ್ಕೆ ಲಿಂಗವಿಲ್ಲ. ಲಿಂಗಭೇದದ ಸಮಸ್ಯೆಯಿಲ್ಲದ ಒಂದೇ ಒಂದು ಧರ್ಮವಿದ್ದರೆ, ಅದು ಸನಾತನ ಧರ್ಮ. ಬ್ರಹ್ಮವೇ ಲಿಂಗಾತೀತ. ಇರುವುದೊಂದೇ ಸತ್ಯ, ಜ್ಞಾನಿಗಳು ಅದನ್ನು ಅನೇಕ ರೀತಿಯಲ್ಲಿ ವರ್ಣಿಸುತ್ತಾರೆ ಎಂದು ಋಗ್ವೇದದಲ್ಲಿ ಹೇಳಲಾಗಿದೆ. ಅಧ್ಯಾತ್ಮದ ಮಟ್ಟದಲ್ಲಿ, ಹೊರಗಿನ ದೇವತೆಗಳನ್ನು ನಮ್ಮ ಆಂತರ್ಯದಲ್ಲಿಯೇ ಸಾಕ್ಷಾತ್ಕರಿಸಿಕೊಳ್ಳಲಾಗುತ್ತದೆ. ಹೊರಗಿನ ಸೂರ್ಯ ನಮ್ಮ ಕಣ್ಣಿನ ನೋಡುವ ಶಕ್ತಿ. ಹೊರಗಿನ ದಿಗ್ದೇವತೆಗಳು ನಮ್ಮ ಕಿವಿಗಳ ಕೇಳುವ ಶಕ್ತಿ. ಹೊರಗಿನ ಚಂದ್ರನು ನಮ್ಮ ಮನಸ್ಸಿನ ಶಕ್ತಿ - ಇವೆಲ್ಲವೂ ಪುರುಷಸೂಕ್ತದಲ್ಲಿ ವರ್ಣಿತವಾಗಿವೆ. ಇವೆಲ್ಲವನ್ನೂ ನಾವು ನಮ್ಮ ಶಾಲೆಗಳಲ್ಲಿ ಕಲಿಸುತ್ತಿಲ್ಲ. ದೇವಾಲಯ ವಾಸ್ತುಶಿಲ್ಪದ ಅಧ್ಯಯನ ಮಾಡುವವರೂ ಇವುಗಳನ್ನು ಕಲಿಯುವುದಿಲ್ಲ.

ಆರಾಧನೆಯು ಯಜ್ಞದ ರೂಪದಲ್ಲಿ ನಡೆಯುತ್ತದೆ. ಇದು ಹಂಚಿಕೊಳ್ಳುವ ಪರಮ ಉದ್ದೇಶವನ್ನು ಹೊಂದಿದ ಒಂದು ಕ್ರಿಯೆ. ಯಜ್ ಪೂಜಾಯಾಂ, ಸಂಗತೀಕರಣೇ, ಅಪಾಕರಣೇ - ಪೂಜೆ ಎಂದರೆ ಗೌರವಪೂರ್ಣ ಆರಾಧನೆ, ಸಂಗತೀಕರಣ ಅಂದರೆ ಒಟ್ಟು ಸೇರುವುದು, ಸಂವಾದ ನಡೆಸುವುದು, ಅಪಾಕರಣ ಅಂದರೆ ಹಂಚಿಕೊಳ್ಳುವುದು. ಹಂಚಿಕೊಳ್ಳಲು ದೊಡ್ಡ ಸಮಾಜ ಬೇಕಾಗುತ್ತದೆ. ಪ್ರತಿಲೋಮ ಮತ್ತು ಅನುಲೋಮ ವರ್ಣಗಳ ಎಲ್ಲ ಜನರಿಗೂ ಯಜ್ಞದಲ್ಲಿ ಅವಕಾಶವಿರುತ್ತಿತ್ತು. ಯಾವುದೇ ವರ್ಣದ ವ್ಯಕ್ತಿಯು ಯಜ್ಞದಲ್ಲಿ ಪಾಲ್ಗೊಳ್ಳಬಹುದು ಎಂದು ಯಜುರ್ವೇದ ಹೇಳುತ್ತದೆ. ಉದಾಹರಣೆಗೆ ಯಜ್ಞದ ಬೇರೆ ಬೇರೆ ಕ್ರಿಯೆಗಳ ನಡುವೆ ಪ್ರತಿಲೋಮ ವರ್ಣದ ಸೂತರು ಗಾಯನ ಮತ್ತು ಮಹಾಭಾರತ-ರಾಮಾಯಣಗಳ ಪ್ರವಚನ ಸಹ ನಡೆಸುತ್ತಿದ್ದರು. ಯಜ್ಞಗಳ ಕುರಿತು ಅಧ್ಯಯನ ಮಾಡದಿದ್ದರೆ ಸನಾತನ ಸಂಸ್ಕೃತಿಯ ಬಗ್ಗೆ ಏನನ್ನೂ ತಿಳಿದುಕೊಂಡಂತಾಗುವುದಿಲ್ಲ.

ಯಜ್ಞವೇದಿಗಳಿಂದ ದೇವಾಲಯಗಳ ಕಲ್ಪನೆ ಮೂಡಿತು ಎನ್ನಬಹುದು. ಉದಾಹರಣೆಗೆ ಮಹಾವೇದಿಯು ಆಗಮ ಶಾಸ್ತ್ರದಲ್ಲಿ ನಿರೂಪಿತವಾಗಿರುವ 'ಮೂಲ ಬೇರ'. ಅಗ್ನಿಯು ವಿಮಾನವಾಯಿತು. ಭಾರತದ ದೇವಾಲಯಗಳಲ್ಲಿ ಧ್ವಜಸ್ಥಂಭವಿರುತ್ತದೆ. ಇದು ಯಜ್ಞದ ಯೂಪಸ್ಥಂಭ. ನಂತರ, ಬಲಿಪೀಠವಿರುತ್ತದೆ. ಈ ಬಲಿಪೀಠವು ಕೇವಲ ಪ್ರಾಣಿಗಳ ಬಲಿಗೆ ಎಂದು ತಿಳಿಯಬಾರದು.. ಬಲಿ ಎಂದರೆ ಯಾವುದೇ ವಸ್ತುವಿನ ಸಮರ್ಪಣೆ. "ದೇವಾಲಯಗಳ ಪ್ರಯೋಗಶಾಲೆ" ಎಂದೇ ಕರೆಯುವ ಪಟ್ಟದಕಲ್ಲಿನಲ್ಲಿ ದೇವಾಲಯ ವಾಸ್ತುವಿನ ಮೂರು ಪ್ರಧಾನ ಶೈಲಿಗಳನ್ನು ಗುರುತಿಸಬಹುದು. ಉತ್ತರ ಭಾರತದಲ್ಲಿ ನಾಗರ ಶೈಲಿಯ ದೇವಾಲಯಗಳಿವೆ ಮತ್ತು ದಕ್ಷಿಣದಲ್ಲಿ ದ್ರಾವಿಡ ಶೈಲಿಯ ದೇವಾಲಯಗಳಿವೆ. ದ್ರಾವಿಡ ಎಂದರೆ ದಟ್ಟವಾದ ಅರಣ್ಯ ಪ್ರದೇಶ. ಇದು ಯಾವುದೇ ಭಾಷೆ ಅಥವಾ ಜನವರ್ಗವನ್ನು ಸೂಚಿಸುವುದಿಲ್ಲ.




ಶತಾವಧಾನಿ ಡಾ|| ಆರ್. ಗಣೇಶ್

ನನ್ನ ಸಂಶೋಧನೆಯ ಪ್ರಕಾರ, ನಾಗರ ಶೈಲಿಯ ದೇವಾಲಯಗಳ ತಳಪಾಯವು ಹೆಚ್ಚುಕಡಿಮೆ ವೃತ್ತಾಕಾರದಲ್ಲಿರುತ್ತದೆ. ದ್ರಾವಿಡ ದೇವಾಲಯಗಳು ಚೌಕಾಕಾರದಲ್ಲಿರುತ್ತವೆ. ವೇಸರ ಶೈಲಿಯ ದೇವಾಲಯಗಳು ಅರ್ಧಚಂದ್ರಾಕಾರದಲ್ಲಿರುತ್ತವೆ. ಇವುಗಳನ್ನು ಆಹವನೀಯ (ಚೌಕಾಕಾರ), ಗಾರ್ಹಪತ್ಯ (ವೃತ್ತಾಕಾರ) ಮತ್ತು ದಕ್ಷಿಣಾಗ್ನಿ (ಅರ್ಧಚಂದ್ರಾಕಾರ)ಗಳಿಗೆ ಸಮೀಕರಿಸಬಹುದು. ವೇದಿಗಳಿಂದ ಮಂಡಲಗಳು, ಮಂಡಲಗಳಿಂದ ದೇವಾಲಯಗಳ ತಳಪಾಯಗಳು ಮೂಡಿಬಂದವು.

'ನೆಲದ ಮೇಲೆ ಕಟ್ಟಿದ ದೇವಾಲಯಗಳಿಗಿಂತ ಮೊದಲು ಗುಹಾ ದೇವಾಲಯಗಳು ರಚನೆಯಾದವು ನಂತರ ಭೂಮಿಯ ಮೇಲೆ ಕಟ್ಟಲ್ಪಟ್ಟವು' ಎಂದು ಹೇಳುವುದು ಸರಿಯಲ್ಲ. ಈ ವಾದವನ್ನು ಸಮರ್ಥಿಸಿಕೊಳ್ಳಲು ಯಾವುದೇ ಆಧಾರಗಳಿಲ್ಲ. ದೇವಾಲಯಸಂಕೀರ್ಣದ ತಲವಿನ್ಯಾಸವು ಮಾನವನ ದೇಹ ರಚನೆಯನ್ನು ಹೋಲುತ್ತದೆ. ಕಾಲಿನ ಮಟ್ಟದಲ್ಲಿ ಪ್ರವೇಶದ್ವಾರ ಅಥವಾ ರಾಜಗೋಪುರ, ಬಲಿಪೀಠವೇ ಹೊಟ್ಟೆ, ಧ್ವಜಸ್ಥಂಭವೇ ಜನನಾಂಗ, ನವರಂಗವೇ ಎದೆ, ಅಂತರಾಳವೇ ಕುತ್ತಿಗೆ ಆಜ್ಞಾಚಕ್ರವೇ ಮೂಲಬೇರ. ಅದೇರೀತಿ ಮಾನವನ ನಿಂತಭಂಗಿಯಲ್ಲಿಯೂ ದೇವಾಲಯಗಳನ್ನು ಕಲ್ಪಿಸಿಕೊಳ್ಳಬಹುದು. ಅಧಿಷ್ಠಾನವನ್ನು ಕಾಲು ಎಂದು ತಿಳಿದರೆ, ಭಿತ್ತಿ, ವಲಭಿ, ಗಲ, ವಿಮಾನ ಬ್ರಹ್ಮರಂಧ್ರಗಳು ದೇಹದ ಇತರ ಭಾಗಗಳನ್ನು ಸಂಕೇತಿಸುತ್ತವೆ.

ಮಾನವನ ದೇಹವು ಯಜ್ಞಪುರುಷನನ್ನು ಪ್ರತಿನಿಧಿಸುತ್ತದೆ. ಪುರುಷನೆಂದರೆ ಮನುಷ್ಯನಲ್ಲ, ಯಾವ ಜೀವಿಯನ್ನೂ ಪುರುಷ ಎನ್ನಬಹುದು. ದೇಹ ಮತ್ತು ಚೈತನ್ಯವಿರುವ ಎಲ್ಲವೂ ಪುರುಷ. "ಬ್ರಹ್ಮಾಂಡದ ಬೀಜವೇ ಪುರುಷ" ಎಂದು ವೇದಗಳು ಹೇಳುತ್ತವೆ. ಸೃಷ್ಟಿ ಎನ್ನುವುದು ಸರಳವಾದ ಕ್ರಿಯೆಯಲ್ಲ, ನಾಚಿಕೆ ಪಟ್ಟುಕೊಳ್ಳುವ ಸಂಗತಿಯೂ ಅಲ್ಲ.

ಪುಟ 6 ರಲ್ಲಿ ಮುಂದುವರೆದಿದೆ



ಪುಟ 5 ರಿಂದ

ಯಜ್ಞ, ಆರಾಧನೆಗಳಲ್ಲಿ ಸಂಭೋಗವೂ ಸಾಂಕೇತಿಕವಾಗಿ ಕಂಡುಬರುತ್ತದೆ. ಲಿಂಗವೆನ್ನುವುದು ಒಂದು ಸಂಕೇತ. ಹೊಗೆಯು ಬೆಂಕಿಯನ್ನು ಸಂಕೇತಿಸುವಂತೆ ಲಿಂಗವು ನಮ್ಮ ಅಸ್ಮಿತೆಯ ಸಂಕೇತವಾಗಿರುತ್ತದೆ. ಇದನ್ನು ಮೀರಬೇಕೆಂಬುದೇ ದೇವಾಲಯಗಳ ಉದ್ದೇಶ. ದೇವಾಲಯಗಳು ದೇವರ ಮನೆ. ಬಲಿಪೀಠ ಹೊಟ್ಟೆ; ಅಲ್ಲಿ ಬಲಿಹರಣ ನಡೆಯುತ್ತದೆ. ನವರಂಗದಲ್ಲಿ ನೃತ್ಯ ಸಂಗೀತ ಮುಂತಾದವುಗಳ ಮೂಲಕ ರಂಜನೆ ನಡೆಯುತ್ತದೆ. ಮಾನವನ ಹೃದಯವೂ ರಂಜನೆಯ ಸ್ಥಳ. ಮನಸ್ಸು ಮತ್ತು ಬುದ್ಧಿಗಳು ಸಂಗಮಿಸುವ ಆಜ್ಞಾಚಕ್ರವು ಮೂಲಬೇರ. ಇಲ್ಲಿ ಸೂರ್ಯನಾಡಿ ಮತ್ತು ಚಂದ್ರನಾಡಿಗಳು ಪರಸ್ಪರ ಹಾದುಹೋಗುತ್ತವೆ. ಇದರ ನಂತರ ಸಹಸ್ರಾರ. ಇದು ದೇವಾಲಯದ ಶಿಖರ. ಹೀಗೆ ದೇವಾಲಯವು ಸಮತಲದಲ್ಲಿಯೂ ಲಂಬವಾಗಿಯೂ ಮಾನವನ ದೇಹವನ್ನೇ ಸಂಕೇತಿಸುತ್ತದೆ.

ದೇವಾಲಯಗಳು ಸಂಸ್ಕೃತಿಯ ಕೇಂದ್ರಗಳಾಗಿದ್ದವು. ನಮ್ಮಲ್ಲಿ ಒಟ್ಟು ಅನೇಕ ಆಗಮಗಳು ಮತ್ತು ೬೪ ತಂತ್ರಗಳಿವೆ. ೬೪ನೇ ತಂತ್ರವನ್ನು ಶಾಕ್ತತಂತ್ರ ಎನ್ನುತ್ತಾರೆ. ಶೈವ ಮತ್ತು ವೈಷ್ಣವ ತಂತ್ರಗಳೂ ಇವೆ. ಇವುಗಳಲ್ಲಿಯೂ ಹಲವಾರು ವಿಭಾಗಗಳಿವೆ. ಆಗಮಗಳಲ್ಲಿ ಜ್ಞಾನಪಾದ, ಯೋಗಪಾದ, ಕ್ರಿಯಾಪಾದ ಮತ್ತು ಚರ್ಯಾಪಾದ ಎಂಬ ನಾಲ್ಕು ವಿಭಾಗಗಳಿವೆ. ಇವುಗಳಲ್ಲಿ ಜ್ಞಾನ, ದೇವಾಲಯಗಳ ಹಿಂದಿನ ಆಧ್ಯಾತ್ಮಿಕತೆ, ನಿರ್ಮಾಣವಿಧಾನ ಮತ್ತು ಉತ್ಸವಾಚರಣೆಗಳ ವಿವರಗಳು ದೊರೆಯುತ್ತವೆ.

ದೇವಾಲಯಗಳ ವಿಮಾನವು ಯಾವುದೇ ಅತಿಮಾನವರನ್ನು ಸೂಚಿಸುವುದಿಲ್ಲ. ವಿಮಾನ ಎಂದರೆ ವಿಶೇಷವಾದ ಅಳತೆ. ದೇವಾಲಯಗಳಲ್ಲಿ ದೇವರಿಗೆ ಸಮರ್ಪಿತವಾಗುವ ಫಲಪುಷ್ಪಗಳನ್ನು ಬೆಳೆಸಲು ಶೃಂಗಾರತೋಟಗಳಿರುತ್ತವೆ, ನೀರನ್ನು ಒದಗಿಸುವ ಪುಷ್ಕರಿಣಿಗಳಿರುತ್ತವೆ. ದೇವಾಲಯಕ್ಕೆ ಸಂಬಂಧಿಸಿದಂತೆ ದೇವದಾಸಿಯರಿರುತ್ತಾರೆ. ಇವರು ವೇಶ್ಯಾವೃತ್ತಿಗೆ ಸಂಬಂಧಿಸಿದವರಲ್ಲ. ಇವರು ದೇವಾಲಯದ ದೇವರನ್ನು ಮದುವೆಯಾದವರಾಗಿದ್ದು ನೃತ್ಯ ಮತ್ತು ಸಂಗೀತಗಳಲ್ಲಿ ಪಾರಂಗತರಾಗಿರುತ್ತಿದ್ದರು. ದೇವದಾಸಿಯರು ನಿಧನರಾದರೆ ದೇವರಿಗೂ ಸೂತಕ ಮತ್ತು ಇಡೀ ದೇವಾಲಯವೇ ಸೂತಕ ಆಚರಿಸುತ್ತಿತ್ತು. ಅವರ ದಹನಕ್ಕೆ ದೇವಾಲಯದ ಅಡುಗೆಮನೆಯಿಂದಲೇ ಅಗ್ನಿಯನ್ನು ತರಲಾಗುತ್ತಿತ್ತು. ದೇವಾಲಯಗಳಲ್ಲಿ ದೇವರ ಜನನ ಮತ್ತು ಮರಣಗಳೆರಡನ್ನೂ ಆಚರಿಸುವುದುಂಟು. ಪುರಿಯ ಜಗನ್ನಾಥ ಮಂದಿರದ ನವಕಳೇಬರ ಉತ್ಸವ ಇದಕ್ಕೆ ಉದಾಹರಣೆ. ಇದನ್ನು ನೆರವೇರಿಸುವವರು ಶಬರ ಅಥವಾ ಸವರ ಎಂಬ ಬುಡಕಟ್ಟು ಜನಾಂಗದವರು. ಜಗನ್ನಾಥನಿಗೆ ಮಾನವ ದೇಹಕ್ಕೆ ನಡೆಸುವ ಉಪಚಾರಗಳನ್ನು ನಡೆಸಲಾಗುತ್ತದೆ.

ಇವೆಲ್ಲ ಬಾಹ್ಯವಿಚಾರಗಳಾದವು. ಇವು ದೇವಾಲಯಗಳ ಜಡ ಆಯಾಮದ ಕುರಿತಾದವು. ಯಜ್ಞದಲ್ಲಿ ಮೂರು ಹೊತ್ತಿನ ಆಹುತಿಗಳನ್ನು ನೀಡಲಾಗುತ್ತದೆ. ಪ್ರತಿದಿನ ನಿರಂತರವಾಗಿ ಕ್ರಿಯೆಗಳು ನಡೆಯುತ್ತವೆ. ಕೆಲವೊಮ್ಮೆ ತಡರಾತ್ರಿಯವರೆಗೂ ಕ್ರಿಯೆಗಳು ನಡೆಯುವುದುಂಟು. ಅದೇ ರೀತಿ, ದೇವಾಲಯಗಳಲ್ಲಿ ತ್ರಿಕಾಲ ಪೂಜೆ, ನೈವೇದ್ಯ, ವಾರ್ಷಿಕ ಉತ್ಸವಗಳು, ಋತುಮಾನ, ಮಾಸ ಮತ್ತು ದೈನಂದಿನ ಕಾರ್ಯಗಳು ನಡೆಯುತ್ತವೆ.

ಯಜ್ಞಸಂಸ್ಕೃತಿಯನ್ನು ಆಳವಾಗಿ ಅಧ್ಯಯನ ಮಾಡಿದರೆ ದೇವಾಲಯಗಳ ಉಗಮ, ನಿರ್ಮಾಣ ಮತ್ತು ವಿಕಾಸಗಳ ಬಗ್ಗೆ ತಿಳಿಯುತ್ತದೆ. ದುರದೃಷ್ಟವಶಾತ್ ಯಜ್ಞದ ಶ್ರೌತಭಾಗ ಮತ್ತು ದೇವಾಲಯಗಳ ಆಗಮಭಾಗದ ನಡುವೆ ಸಂಪರ್ಕ ಕಡಿದು ಹೋಗಿದೆ. ನಾವು ಅವುಗಳ ಮೂಲಕ್ಕೆ ತೆರಳಬೇಕು. ಆಗ ಅವುಗಳ ನಡುವೆ ಇರುವ ಸಾಮ್ಯ ಮತ್ತು ಪೂರಕತ್ವ ತಿಳಿದುಬರುತ್ತದೆ. ವೇದಗಳ ಆರು ಭಾಗಗಳಲ್ಲಿ ಒಂದಾಗಿರುವ ಕಲ್ಪಸೂತ್ರದಲ್ಲಿ ದೇವಾಲಯಗಳ ನಿರ್ಮಾಣ, ಸಂಪ್ರದಾಯ ಮತ್ತು ಆರಾಧನೆ ಮುಂತಾದ ವಿಷಯಗಳ ಬಗ್ಗೆ ವಿವರಗಳು ದೊರೆಯುತ್ತವೆ. ವೇದಗಳಲ್ಲಿಯೇ ವಿಗ್ರಹಾರಾಧನೆಯ ವಿವರಗಳು ದೊರೆಯುತ್ತವೆ. (ಅನಂತಕುಮಾರ್ ಪ್ರತಿಷ್ಠಾನವು ಬಿ.ಎಂ.ಎಸ್. ಕಾಲೇಜ್ ಆಫ್ ಆರ್ಕಿಟೆಕ್ಚರ್ ಸಂಸ್ಥೆಯ ಸಹಯೋಗದಲ್ಲಿ ನಡೆಸಿದ ವಿಚಾರಸಂಕಿರಣದಲ್ಲಿ ಮಾಡಿದ ಭಾಷಣದ ಆಯ್ದ ಭಾಗಗಳು)

# ಸ್ವದೇಶಿ ಮೇಳದಲ್ಲಿ ಅದಮ್ಯ ಚೇತನ

ಪುಟ 1 ರಿಂದ

ಪ್ರತಿ ದಿನ ರಾತ್ರಿ 7ಕ್ಕೆ ಆರಂಭವಾಗುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ರಂಜಿಸಿದವು. ಮನೆಮನೆಗಳಲ್ಲಿ ಸ್ವದೇಶಿ ಭಾವದ ಪ್ರಕಟೀಕರಣಕ್ಕಾಗಿ ಕುಟುಂಬ ಪ್ರಬೋಧನ ಕಾರ್ಯಕ್ರಮವು ಪ್ರೇಕ್ಷಕರ ವಿಚಾರಗಳಲ್ಲಿ ಸಂಚಲನ ಮೂಡಿಸಿತು.

ಸುಮಾರು 225ಕ್ಕೂ ಅಧಿಕ ದೇಶೀಯ ಉತ್ಪಾದಕ ಸಂಸ್ಥೆಗಳು ತಮ್ಮ ವೈವಿಧ್ಯಮಯ ಉತ್ಪಾದನೆಗಳನ್ನು ಪ್ರದರ್ಶಿಸಿದ್ದವು. ಪ್ರಾದೇಶಿಕ ಸೊಗಡಿನ ಆಹಾರದ ತಿನಿಸುಗಳ ಕುರಿತು ಈ ಮೇಳವು ಪ್ರೇಕ್ಷಕರಿಗೆ ಮಾಹಿತಿ ನೀಡಿ, ಕಡಿಮೆ ದರದಲ್ಲಿ ಶುಚಿ-ರುಚಿಕರ ಸ್ವಾದದ ತಿನಿಸುಗಳನ್ನು ಉಣಬಡಿಸಿತು.

ಭಾರತೀಯ ಸಂಸ್ಕೃತಿ-ಪರಂಪರೆಯ ನಿರಂತರತೆಗಾಗಿ ಕಳೆದ 26 ವರ್ಷದಿಂದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟವನ್ನು ಸತತವಾಗಿ ಪೂರೈಸುತ್ತಿರುವ ಅದಮ್ಯ ಚೇತನ ಸಂಸ್ಥೆಯ ಸ್ವದೇಶಿತನವನ್ನು ಪ್ರೇಕ್ಷಕರು ಪ್ರಶಂಸಿಸಿದರು. ಕಸರಹಿತ ಅಥವಾ ಶೂನ್ಯಕಸದ ಅಡುಗೆಮನೆ "ಅನ್ನಪೂರ್ಣ"ದ ಮಾದರಿ, ಹಸಿರು ಭಾನುವಾರ, ಪ್ಲೇಟ್ ಬ್ಯಾಂಕ್, ಚಿಣ್ಣರ ಚೇತನ ಗೋಡೆಪತ್ರಿಕೆ ಇತ್ಯಾದಿ ನಿರಂತರ ಚಟುವಟಿಕೆಗಳ ವಿವರಗಳಿರುವ ಫಲಕಗಳು ಗಮನ ಸೆಳೆದವು.

ಸ್ವದೇಶಿ ಮೇಳದ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ಸ್ವದೇಶಿ ಎನ್ನುವ ಪರಿಕಲ್ಪನೆ ಕೇವಲ ವಸ್ತುಗಳಿಗೆ ಸೀಮಿತವಲ್ಲ. ಅದು ನಮ್ಮ ಬದುಕಿನ ಪ್ರತಿ ನಡೆಯಲ್ಲೂ ವ್ಯಕ್ತವಾಗಬೇಕು. ಆಗಲೇ ನಮ್ಮತನವನ್ನು ಕಾಯ್ದುಕೊಂಡು ಬರಲು ಸಾಧ್ಯವಾಗುತ್ತದೆ. ಇದು ಸ್ವದೇಶಿ ಮೇಳದ ಆಶಯವೂ ಆಗಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವಿ. ವಿಜಯೇಂದ್ರ ಅವರು ಸ್ವದೇಶಿ ಮೇಳವನ್ನು ಉದ್ಘಾಟಿಸಿದರು. ಮೇಳದ ಸಮಾರೋಪ ಸಮಾರಂಭದ ಸಾನ್ನಿಧ್ಯವಹಿಸಿದ್ದ ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿ ಅವರು ಮಾತನಾಡಿ, ಭಾರತದ ಸಂಸ್ಕೃತಿ - ಪರಂಪರೆಯ ಅಂತಃಸತ್ವವನ್ನು ಜಾಗೃತಗೊಳಿಸಲು ಹಾಗೂ ಭಾರತದ ಕರ್ತೃತ್ವಶಕ್ತಿಯ ಅರಿವು ಮೂಡಿಸಲೂ ಸ್ವದೇಶಿ ಮೇಳಗಳು ಸಹಕರಿಸುತ್ತವೆ ಎಂದು ಅಭಿಪ್ರಾಯಪಟ್ಟರು.

ಜಯನಗರ ಕ್ಷೇತ್ರ ಶಾಸಕ ಶ್ರೀ ಸಿ.ಕೆ. ರಾಮಮೂರ್ತಿ ಅಧ್ಯಕ್ಷತೆವಹಿಸಿದ್ದರು. ನಟ, ರಂಗಕರ್ಮಿ ಶ್ರೀ ಪ್ರಕಾಶ ಬೆಳವಾಡಿ ಮುಖ್ಯ ಅತಿಥಿಗಳಾಗಿದ್ದರು. ಸ್ವದೇಶಿ ಚಿಂತಕ ಪ್ರೊ. ಬಿ. ಎಂ. ಕುಮಾರಸ್ವಾಮಿ, ಶಿವಮೊಗ್ಗ ಪ್ರಮುಖ ಭಾಷಣ ಮಾಡಿದರು. ಸಂಸದ ತೇಜಸ್ವಿ ಸೂರ್ಯ, ಸ್ವದೇಶಿ ಜಾಗರಣ ಮಂಚ್ ಸಹ ಸಂಯೋಜಕ ಅಶ್ವಿನ್ ಮಹಾಜನ್, ಸಂಘಟಕರಾದ ಟಿ. ಎಸ್. ಅಶ್ವತ್ಥ ನಾರಾಯಣ, ತಾರಾ ಅನೂರಾಧ, ಅಮಿತ್ ಅಮರನಾಥ ಮೊದಲಾದ ಗಣ್ಯರು ಮೇಳದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.





# “ಭಾರತ ರತ್ನ” ಲಾಲ್ ಕೃಷ್ಣ ಅದ್ವಾನಿ

**ವ್ಯಕ್ತಿ ವಿಶೇಷ ಮಾಲಿಕೆ**

- ಕೆ.ಜನಾರ್ದನ ತುಂಗ

ಸ್ವಾತಂತ್ರ್ಯಪೂರ್ವದ ಅಖಂಡ ಭಾರತದ ಒಂದು ಸಮೃದ್ಧ ಪ್ರದೇಶ ಸಿಂಧ್. ಇಂದಿನ ರಾಜಸ್ಥಾನಕ್ಕೆ ಹೊಂದಿಕೊಂಡಂತಿದ್ದ ಈ ಪ್ರದೇಶದ ಜನಸಂಖ್ಯೆಯ ಶೇ ೨೫ರಷ್ಟು ಹಿಂದೂಗಳು. ವಾಣಿಜ್ಯನಗರಿ ಕರಾಚಿಯಲ್ಲಿ ಹಿಂದೂಗಳೇ ಬಹುಸಂಖ್ಯಾತರು. ಸಿಂಧ್ ಪ್ರಾಂತ್ಯದ ವಾಣಿಜ್ಯ, ಶಿಕ್ಷಣ, ಆಡಳಿತಗಳಲ್ಲಿ ಸಿಂಧಿಗಳದ್ದೇ ಪ್ರಾಬಲ್ಯ. ಇಷ್ಟಿದ್ದರೂ ೧೯೪೭ರ ಅಗಸ್ಟ್ ೧೫ರಂದು ಸಿಂಧಿಗಳು ತಾವು ಬಯಸಿರದ ಪಾಕಿಸ್ತಾನದ ಪ್ರಜೆಗಳಾದರು. ರಾಜಸ್ಥಾನಕ್ಕೆ ಹೊಂದಿಕೊಂಡಿದ್ದ ಜಿಲ್ಲೆಗಳಲ್ಲಿ ಹಿಂದೂಗಳೇ ಬಹುಸಂಖ್ಯಾತರಾಗಿದ್ದರೂ ನೆಹರೂ ಮುಂತಾದವರ ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅವೆಲ್ಲ ಪಾಕಿಸ್ತಾನದಲ್ಲಿಯೇ ಉಳಿದುಕೊಂಡವು.



ಪಾಕಿಸ್ತಾನವು ಧರ್ಮದ ಆಧಾರದಲ್ಲಿ ಹುಟ್ಟಿಕೊಂಡ ದೇಶವಾದುದರಿಂದ ಅಲ್ಲಿ ಹಿಂದೂಗಳ ಜೀವನ ದುರ್ಭರವಾಯಿತು. ಗಡಿಯುದ್ದಕ್ಕೂ ನಡೆದ ನರಮೇಧ ಸಿಂಧ್ ಜನರನ್ನು ಧೃತಿಗೆಡಿಸಿತ್ತು. ಮಿಗಿಲಾಗಿ, ಅಲ್ಲಿ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಜನರಮೇಲೆ, ಅದರಲ್ಲೂ ಪ್ರಮುಖವಾಗಿ ಆರೆಸ್ಸೆಸ್ ಕಾರ್ಯಕರ್ತರ ಮೇಲೆ ದೌರ್ಜನ್ಯ ಪ್ರಾರಂಭವಾಯಿತು. ಹೀಗಾಗಿ, ಅಲ್ಲಿಂದಲೂ ಹಿಂದೂಗಳ ವಲಸೆ ಪ್ರಾರಂಭವಾಯಿತು. ದೇಶವಿಭಜನೆಯು ಒಂದು ಕೋಟಿ ಜನರನ್ನು ತಮ್ಮ ದೇಶದಲ್ಲಿಯೇ ವಲಸಿಗರನ್ನಾಗಿ ಮಾಡಿದ ಮಹಾನ್ ದುರ್ಘಟನೆ.

ಇಂದು ಭಾರತದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ, ಔದ್ಯೋಗಿಕ, ನ್ಯಾಯಾಂಗ, ಆಡಳಿತ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ಮಸಾನಿ, ಮಲ್ಕಾನಿ, ವಾಸ್ವಾನಿ, ಕೃಪಲಾನಿ, ಅದಾನಿ, ಅಂಬಾನಿ, ಜೇಠ್ಮಲಾನಿ, ಗಿದ್ವಾನಿ ಮುಂತಾದವರೆಲ್ಲ ಪಾಕಿಸ್ತಾನದಲ್ಲಿ ತಮ್ಮ ಅಪಾರ ಸಂಪತ್ತನ್ನು ಹಿಂದೆ ಬಿಟ್ಟು ವಲಸೆಬಂದವರೇ. ಆದರೆ ತಮಗಾದ ಮಾನಸಿಕ ಮತ್ತು ಆರ್ಥಿಕ ಸಂಕಷ್ಟಗಳಿಂದ ಕಂಗೆಡದೆ ಇಂದು ಅವರೆಲ್ಲ ಆಯಾಕ್ಷೇತ್ರಗಳಲ್ಲಿ ಭಾರತದ ರಾಯಭಾರಿಗಳಾಗಿದ್ದಾರೆ ಎಂಬುದು ಸಿಂಧೀ ಜನಾಂಗದ ಕರ್ತೃತ್ವ ಶಕ್ತಿಗೆ ನಿದರ್ಶನ.

ಇಂತಹ ಜನಾಂಗಕ್ಕೆ ಸೇರಿದವರು ಶ್ರೀ ಲಾಲ್ ಕೃಷ್ಣ ಅದ್ವಾನಿ. ಹುಟ್ಟಿದ್ದು ಕರಾಚಿಯಲ್ಲಿ, ದಿನಾಂಕ ೮/೧೧/೧೯೨೭ರಂದು. ಜೀವನದ ಮೊದಲ ಇಪ್ಪತ್ತು ವರ್ಷಗಳನ್ನು ಕರಾಚಿಯಲ್ಲಿ ಕಳೆದ ಇವರು ತಮ್ಮ ವಿದ್ಯಾಭ್ಯಾಸವನ್ನು ಕರಾಚಿ ಮತ್ತು ಹೈದರಾಬಾದುಗಳಲ್ಲಿ ನಡೆಸಿದರು. ಮನೆಯಲ್ಲಿದ್ದ ಧಾರ್ಮಿಕ ವಾತಾವರಣ, ಕರಾಚಿಯ ರಾಮಕೃಷ್ಣ ಮಿಶನ್ ಮುಖ್ಯಸ್ಥರಾದ ಸ್ವಾಮಿ ರಂಗನಾಥಾನಂದಜೀಯವರ ಮತ್ತು ಮಹರ್ಷಿ ಅರಬಿಂದೋರವರ ಪ್ರಭಾವದಿಂದ ಸಾಂಸ್ಕೃತಿಕವಲಯದಲ್ಲಿ ಸಕ್ರಿಯರಾದ ಅದ್ವಾನಿಯವರು ತಮ್ಮ ೧೪ನೇ ವಯಸ್ಸಿಗೆ ಸಂಘದ ಸದಸ್ಯತ್ವ ಪಡೆದರು. ಕರಾಚಿ ನಗರದ ಕಾರ್ಯದರ್ಶಿಯಾಗಿ ತಮ್ಮ ಸಾರ್ವಜನಿಕ ಜೀವನವನ್ನು ಪ್ರಾರಂಭಿಸಿದರು. ನಂತರ, ಕಿರಿಯ ವಯಸ್ಸಿಗೇ ರಾಜಸ್ಥಾನದ ಪ್ರಚಾರಕ್ ಆಗಿ ಕೆಲಸ ಮಾಡಿದರು.

ದೇಶವಿಭಜನೆಯ ಬೆನ್ನಲ್ಲೇ ೧೨/೦೯/೧೯೪೭ರಂದು ಪಾಕಿಸ್ತಾನವನ್ನು ತೊರೆದು ಭಾರತಕ್ಕೆ ಬಂದಿಳಿದರು. ೧೯೫೧ರಲ್ಲಿ ಭಾರತೀಯ ಜನಸಂಘದ ಸ್ಥಾಪಕ ಸದಸ್ಯರಾಗಿ ದೆಹಲಿ ಘಟಕದ ಅಧ್ಯಕ್ಷರೂ ಆದರು. ೧೯೬೭ರಲ್ಲಿ ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಮೊದಲ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೭೦ರಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ಅವರು ೧೯೮೯ರವರೆಗೂ ಮರು ಆಯ್ಕೆಯಾಗುವ ಮೂಲಕ ಸುದೀರ್ಘ ಸೇವೆ ಸಲ್ಲಿಸಿದರು.

ಭಾರತೀಯ ರಾಜಕೀಯದಲ್ಲಿ ಅದ್ವಾನಿ ಮತ್ತು ವಾಜಪೇಯಿಯವರದ್ದು ಅನುಪಮ ಜೋಡಿ. ವಾಜಪೇಯಿ ಉತ್ತಮ ಆಡಳಿತಗಾರರಾಗಿದ್ದರೆ ಅದ್ವಾನಿಯವರು ಉತ್ತಮ ಸಂಘಟಕರು. ಇಬ್ಬರೂ ಪ್ರಖರ ವಾಗ್ಮಿಗಳು. ಕಳೆದ ಐವತ್ತು ವರ್ಷಗಳಲ್ಲಿ ರಾಜಕೀಯದ ಗತಿಯನ್ನೇ ಬದಲಾಯಿಸಿದ ಇವರೀರ್ವರು ಭಾರತದ ರಾಜಕೀಯ ನಭದ ಧ್ರುವತಾರೆಗಳು ಎಂದರೆ ಅತಿಶಯೋಕ್ತಿಯಲ್ಲ..

ಅದ್ವಾನಿಯವರು ೧೯೭೩ರಲ್ಲಿ ಭಾರತೀಯ ಜನಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು. ಆಡಳಿತ ಪಕ್ಷವಾದ ಕಾಂಗ್ರೆಸ್ ಪಕ್ಷವನ್ನು ಎದುರಿಸಲು ವಿರೋಧ ಪಕ್ಷಗಳ ಏಕತೆ ಅಗತ್ಯ ಎಂಬುದನ್ನು ಮನಗಂಡು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ೧೯೭೫ರಲ್ಲಿ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿ ಘೋಷಣೆ ಮಾಡಿ ಇತರ ವಿರೋಧಿ ಮುಖಂಡರ ಜೊತೆಗೆ ಅದ್ವಾನಿಯವರನ್ನೂ ೨೬/೦೬/೧೯೭೫ರಂದು ಬಂಧಿಸಿ ಬೆಂಗಳೂರಿನ ಕಾರಾಗ್ರಹದಲ್ಲಿರಿಸಿದರು. ತುರ್ತುಪರಿಸ್ಥಿತಿ ಕೊನೆಗೊಂಡು ಜೈಲಿನಿಂದ ಬಿಡುಗಡೆಯಾದ ನಂತರ ಮತ್ತೊಮ್ಮೆ ವಿರೋಧ ಪಕ್ಷಗಳನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಜನತಾಪಕ್ಷ ಸ್ಥಾಪನೆಯಾದಾಗ ಭಾರತೀಯ ಜನಸಂಘವನ್ನು ಅದರಲ್ಲಿ ವಿಲೀನಗೊಳಿಸಿದರು. ಜನತಾ ಪಕ್ಷದ ಪ್ರಧಾನಕಾರ್ಯದರ್ಶಿಯಾಗಿಯೂ ಆಯ್ಕೆಯಾದರು. ೧೯೭೭ರಲ್ಲಿ ೨೯೫ ಸ್ಥಾನಗಳ ಸ್ಪಷ್ಟಬಹುಮತದೊಂದಿಗೆ ಜನತಾಪಕ್ಷದ ಸರಕಾರ ಅಸ್ತಿತ್ವಕ್ಕೆ ಬಂದಿತು. ಅದ್ವಾನಿಯವರು ಕೇಂದ್ರ ಸಂಪುಟದಲ್ಲಿ ವಾರ್ತಾ ಮತ್ತು ಪ್ರಸಾರ ಇಲಾಖೆಯ ಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಪತ್ರಿಕಾಸ್ವಾತಂತ್ರ್ಯದ ಸಂರಕ್ಷಣೆಗಾಗಿ ಪ್ರಸಾರಭಾರತಿ ಸ್ವಾಯತ್ತ ಸಂಸ್ಥೆಯ ಸ್ಥಾಪನೆಗೆ ಕಾರಣರಾದರು.

ಮುಂದೆ ದ್ವಿಸದಸ್ಯತ್ವದ ಅನಗತ್ಯ ವಿವಾದ ಸೃಷ್ಟಿಯಾದಾಗ ವಾಜಪೇಯಿಯವರ ಜೊತೆಗೆ ಜನತಾಪಕ್ಷದಿಂದ ಹೊರಬಂದು ೦೬/೦೪/೧೯೮೦ರಂದು ಭಾರತೀಯ ಜನತಾಪಕ್ಷವನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಪ್ರಧಾನಕಾರ್ಯದರ್ಶಿಯಾಗಿ, ನಂತರ ಮೇ, ೧೯೮೬ರಿಂದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಈ ಹೊತ್ತಿನಲ್ಲಿ ಪಕ್ಷದ ಸಾಧನೆ ತಳಕಚ್ಚಿತ್ತು. ೧೯೮೪ರ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷವು ಶೇ ೭.೬೬ ಮತಗಳಿಕೆಯೊಂದಿಗೆ ಕೇವಲ ಎರಡು ಸ್ಥಾನಗಳಲ್ಲಿ ಜಯಗಳಿಸಿತ್ತು. ಹೀಗಿದ್ದರೂ ೧೧೧ ಸ್ಥಾನಗಳಲ್ಲಿ ದ್ವಿತೀಯ ಸ್ಥಾನಿಯಾಗುವುದರ ಮೂಲಕ ಕೇಡರ್ ಆಧಾರಿತ ಪಕ್ಷವೆಂದು ಸಾಬೀತಾಗಿತ್ತು.

ಅದ್ವಾನಿಯವರು ಅನೇಕ ಸಾರ್ವಜನಿಕ ಮಹತ್ವದ ವಿಷಯಗಳನ್ನು ಚರ್ಚೆಯ ಮುನ್ನೆಲೆಗೆ ತರುವ ಮೂಲಕ ಪಕ್ಷವನ್ನು ಬೆಳೆಸಲು ಪ್ರಯತ್ನಿಸಿದರು. ಶಾಬಾನೋ ಪ್ರಕರಣದಲ್ಲಿ ಮುಸ್ಲಿಂ ಮಹಿಳೆಯರ ಜೀವನಾಂಶವನ್ನು ಕುರಿತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿಫಲಗೊಳಿಸಿದ ರಾಜೀವಗಾಂಧಿ ಸರಕಾರದ ನಿಲುವುಗಳನ್ನು ತೀವ್ರವಾಗಿ ಖಂಡಿಸಿ ಸಮಾನ ನಾಗರಿಕ ಸಂಹಿತೆಯ ಪರ ವಾದಿಸಿದರು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ವಿಷಯವನ್ನು ಗಂಭೀರವಾಗಿ ಕೈಗೆತ್ತಿಕೊಂಡು ೧೯೯೦ರ ಸೆಪ್ಟೆಂಬರ್ ೨೫ರಂದು (ಅದು ದೀನದಯಾಳ ಉಪಾಧ್ಯಾಯರ ಜನ್ಮದಿನ) ಸೋಮನಾಥದಿಂದ ಅಯೋಧ್ಯೆಗೆ ರಥಯಾತ್ರೆ ಕೈಗೊಂಡರು. ಯಾತ್ರೆಯು ಬಿಹಾರದಲ್ಲಿ ಸಾಗುತ್ತಿದ್ದಾಗ ಲಾಲುಪ್ರಸಾದ ಯಾದವರ ಸರಕಾರ ಅವರನ್ನು ಬಂಧಿಸಿತು. ಯಾತ್ರೆ ಮೊಟಕಾದರೂ ಉದ್ದೇಶಿತ ಕರಸೇವೆಯ ಪ್ರಯತ್ನಗಳು ಮುಂದುವರೆದವು. ಉತ್ತರಪ್ರದೇಶದ ಮುಲಾಯಂ ಸರಕಾರ ಕರಸೇವಕರ ಮೇಲೆ ಗುಂಡಿನ ಮಳೆಗರೆದು ಸಾವಿರಾರು ಕರಸೇವಕರು ಹತರಾದರು. ರಾಮಮಂದಿರದ ಚಳವಳಿ ಮುಂದುವರೆದು ೦೬/೧೨/೧೯೯೨ರಲ್ಲಿ ಬಾಬ್ರಿ ಮಸೀದಿ ಧ್ವಂಸವಾಗುವುದರ ಜೊತೆಗೆ ಒಂದು ಹಂತ ತಲುಪಿತು.

ಅದ್ವಾನಿಯವರ ನೇತೃತ್ವದಲ್ಲಿ ೧೯೮೯ರ ಚುನಾವಣೆಯಲ್ಲಿ ೮೬ ಸ್ಥಾನ ಗಳಿಸಿತು. ಪಕ್ಷದ ಸಾಧನೆಯನ್ನು ಉತ್ತಮಪಡಿಸಿಕೊಳ್ಳುವ ನಿಟ್ಟಿನಲ್ಲಿ ೧೯೮೯ರಲ್ಲಿ ಶಿವಸೇನೆಯ ಜೊತೆಗೆ ಮೈತ್ರಿ ಮಾಡಿಕೊಂಡರು. ೧೯೯೧ರ ಚುನಾವಣೆಯಲ್ಲಿ ದ್ವಿತೀಯ ಸ್ಥಾನ ಗಳಿಸಿದ ಪಕ್ಷ ೧೯೯೬ರ ಚುನಾವಣೆಯಲ್ಲಿ ೧೬೧ ಸ್ಥಾನಗಳಿಸಿ ಸರಕಾರವನ್ನೂ ರಚಿಸಿತು. ಮುಂದೆ ೧೯೯೮ ಮತ್ತು ೧೯೯೯ರ ಚುನಾವಣೆಗಳಲ್ಲಿ ತಲಾ ೧೮೨ ಸ್ಥಾನಗಳಿಸುವ ಮೂಲಕ ೬ ವರ್ಷಗಳ ಕಾಲ ಕೇಂದ್ರದಲ್ಲಿ ಸರಕಾರ ನಡೆಸಿತು. ಈ ಅವಧಿಯಲ್ಲಿ ಅದ್ವಾನಿಯವರು ಕೇಂದ್ರ ಗೃಹಮಂತ್ರಿಯಾಗಿಯೂ, ಉಪಪ್ರಧಾನ ಮಂತ್ರಿಯಾಗಿಯೂ ಸೇವೆ ಸಲ್ಲಿಸಿದರು. ೨೦೧೦ರ ಚುನಾವಣೆಯಲ್ಲಿ ಪಕ್ಷವು ಅವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸಿತ್ತು. ಇದಲ್ಲದೆ ಅತ್ಯಂತ ಸುದೀರ್ಘಕಾಲ ವಿರೋಧಪಕ್ಷದ ನಾಯಕರಾಗಿ

ಪುಟ 9 ರಲ್ಲಿ ಮುಂದುವರಿದಿದೆ

# ರಾಜಕಾರಣದ ಅಪೂರ್ವ ಜೋಡಿ: ಅದ್ವಾನಿ - ಅನಂತ

ಮೊದಲ ಪುಟದಿಂದ ಪಕ್ಷದ 'ಎ' ಗ್ರೂಪಿನ ಸದಸ್ಯ ಎಂಬ ಮಟ್ಟಿಗೆ ಅದ್ವಾನಿಯವರ ಜೊತೆ ಅನಂತಕುಮಾರರಿಗೆ ಸಂಪರ್ಕವಿತ್ತು. ಕರ್ನಾಟಕದ ಮಟ್ಟಿಗೆ 'ಎ' ಅಂದರೆ ಅದ್ವಾನಿಯವರೋ, ಅನಂತಕುಮಾರರೋ ಎಂಬ ಗೊಂದಲವಿತ್ತಂತೆ! ತಮ್ಮ ಈ ಸಂಪರ್ಕವನ್ನು ಕರ್ನಾಟಕದ ಒಳಿತಿಗಾಗಿ ಬಳಸಿಕೊಳ್ಳಲು ಅವರು ಹಿಂಜರಿಯಲಿಲ್ಲ. ಅದ್ವಾನಿಯವರು ಮೆಟ್ರೋ ರೈಲು ಯೋಜನೆಯ ಮಂತ್ರಿಗಳ ಗುಂಪಿನ (GOM) ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಅವರ ಮನವೊಲಿಸಿ ದೆಹಲಿಯ ನಂತರ ಬೆಂಗಳೂರಿನಲ್ಲಿ ಮೆಟ್ರೋ ಪ್ರಾರಂಭಿಸಲು ಯಶಸ್ವಿಯಾದರು. ಅದ್ವಾನಿಯವರ ಕಡೆಯಿಂದ ಕರ್ನಾಟಕದ ಯಾವುದೇ ಕೆಲಸವಾಗಬೇಕಾಗಿದ್ದರೂ ಮಧ್ಯಸ್ಥಿಕೆ ವಹಿಸುತ್ತಿದ್ದವರು, ಅನಂತಕುಮಾರರೇ.

ಪಕ್ಷವು ನರೇಂದ್ರ ಮೋದಿಯವರನ್ನು ಪ್ರಧಾನಮಂತ್ರಿ ಅಭ್ಯರ್ಥಿ ಎಂದು ಘೋಷಿಸಿದಾಗ ಅದ್ವಾನಿಯವರು ಮುನಿಸಿಕೊಂಡಿದ್ದರು. ಇದು ಮಾಧ್ಯಮಗಳಿಗೆ ಆಹಾರವಾಯಿತು. ಆಗ ಪಕ್ಷದ ಅಧ್ಯಕ್ಷರಾಗಿದ್ದ ರಾಜನಾಥ ಸಿಂಗ್ ಅದ್ವಾನಿಯವರನ್ನು ಒಪ್ಪಿಸಲು ಆಯ್ಕೆ ಮಾಡಿಕೊಂಡದ್ದು ಅನಂತಕುಮಾರ್ ಮತ್ತು ಸುಷ್ಮಾ ಸ್ವರಾಜ್‌ರನ್ನು. ಅವರು ಅದರಲ್ಲಿ ಯಶಸ್ವಿಯೂ ಆದರು.

ಅದ್ವಾನಿಯವರು ತಮ್ಮ ಶಿಷ್ಯನ ಕೊರತೆಗಳನ್ನು ಪ್ರೀತಿಯಿಂದಲೇ ಎತ್ತಿ ತೋರಿಸುತ್ತಿದ್ದರು. ಅನಂತಕುಮಾರರು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರಾಗಿದ್ದಾಗ ಸಂಸತ್ತಿನಲ್ಲಿ ಪದೇಪದೇ ಗದ್ದಲವುಂಟಾಗಿ ಕಲಾಪಗಳು ಮುಂದೂಡಲ್ಪಡುತ್ತಿದ್ದವು. ಈ ಕುರಿತು ಅದ್ವಾನಿಯವರು ತಮ್ಮ ಅಸಮಾಧಾನವನ್ನು ಬಹಿರಂಗವಾಗಿಯೇ ಹೊರಹಾಕಿದ್ದರು. ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ ಪರಿಣಾಮ, ಅನಂತಕುಮಾರರ ಮುಂದಿನ ಕಾರ್ಯಕಾಲ ಅತ್ಯಂತ ಫಲಪ್ರದವಾಗಿತ್ತು.

"ಅನಂತಕುಮಾರರು ಅತ್ಯಂತ ಜನಪ್ರಿಯ ಹಾಗೂ ಕ್ರಿಯಾಶೀಲ ವ್ಯಕ್ತಿ. ಅತ್ಯಂತ ಎಳೆಯ ವಯಸ್ಸಿನಲ್ಲಿಯೇ ರಾಜಕೀಯವನ್ನು ಪ್ರವೇಶ ಮಾಡಿದ ಅವರೊಬ್ಬ ಗಣನೀಯ ನಾಯಕರು. ಅವರಲ್ಲಿ ಪ್ರಚಂಡ ಇಚ್ಛಾಶಕ್ತಿಯಿತ್ತು. ಅವರು ರಾಜಕೀಯದಲ್ಲಿ ತಮ್ಮದೇ ಆದ ಸ್ಥಾನವನ್ನು ಗಳಿಸಿಕೊಂಡಿದ್ದರು. ಅವರು ಬಡವರ ಮತ್ತು ದಲಿತರ ಬಗ್ಗೆ ಅಪಾರವಾದ ಕಾಳಜಿಯನ್ನು ಹೊಂದಿದ್ದರು. ಅವರೊಬ್ಬ ಮಹತ್ವದ ಮತ್ತು ಪ್ರತಿಭಾವಂತ ಸಂಸದೀಯಪಟು. ಸಂಸತ್ತಿನಲ್ಲಿ ಅವರ ಇರುವಿಕೆ ಪ್ರಭಾವಶಾಲಿಯಾಗಿರುತ್ತಿತ್ತು. ಪಕ್ಷಕ್ಕೆ ಅವರ ಕೊಡುಗೆ ಅಪಾರ." - ಇವು ಅನಂತಕುಮಾರರ ಬಗ್ಗೆ ಅದ್ವಾನಿಯವರ ಮಾತುಗಳು.

ಮಾನ್ಯ ಯಡಿಯೂರಪ್ಪನವರು ಎನ್‌ಡಿಟಿವಿಗೆ ೨೦೧೧ರಲ್ಲಿ ನೀಡಿದ ಸಂದರ್ಶನವೊಂದರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅನಂತಕುಮಾರರೇ ಅದ್ವಾನಿಯವರ ಮೊದಲ ಆಯ್ಕೆ ಎಂದು ಹೇಳಿದ್ದರು! ಅದು ನಿಜವೂ ಆಗಿತ್ತು. ಅನಂತಕುಮಾರ್ ಮತ್ತು ಅದ್ವಾನಿಯವರ ನಡುವೆ ಇದ್ದ ಅಪಾರ ವಿಶ್ವಾಸದ ಹಿನ್ನೆಲೆಯಲ್ಲಿ ಅದ್ವಾನಿಯವರಿಗೆ ದೊರೆತ ಭಾರತ ರತ್ನ ಪ್ರಶಸ್ತಿಯನ್ನು ಅನಂತಪಥ, ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯಚೇತನ ಸಂಸ್ಥೆಗಳು ಸಂಭ್ರಮಿಸುತ್ತವೆ.

## ನಿತ್ಯ ಅನ್ನದಾನ- ತಿಂಗಳ ಅಂಕಿಅಂಶ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಜನವರಿಯಲ್ಲಿ ವಿತರಿಸಲಾದ ಊಟದ ಅಂದಾಜು ಸಂಖ್ಯೆ | ಈವರೆಗೂ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4,650 | 1,84,050 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3,100 | 1,20,700 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3,100 | 1,01,900 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4,650 | 64,500 |
| 5 | ಅನಂತ ಪ್ರೇರಣಾ ಕೇಂದ್ರ, ಸೌತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 150 | 20,270 |
| 6 | ಅನಂತಸ್ಮೃತಿ ವನ, ಲಾಲ್ ಬಾಗ್ ಪಶ್ಚಿಮ ದ್ವಾರ ಎದುರು (ಮ.12:30ರಿಂದ 1:30ರವರೆಗೆ) | 4650 | 19,200 |
| | **ಒಟ್ಟು ಅಂದಾಜು** | **20,300** | **5,10,620** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಸಂಖ್ಯೆ | ಸ್ಥಳ | ಭಾಗವಹಿಸಿದವರು | ಚಟುವಟಿಕೆ |
|---|---|---|---|
| **420** **15/01/24** | ಬೆಂಗಳೂರಿನ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯ ಅನಂತ ವನ | ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು, ಯೂತ್ ಫಾರ್ ಸೇವಾ, ಯೂತ್ ಫಾರ್ ಪರಿವರ್ತನ ಸಂಸ್ಥೆಯ ಸದಸ್ಯರು | 2 ಗಿಡಗಳು ಹಾಗೂ ಈ ಹಿಂದೆ ನೆಟ್ಟಿದ್ದ ಗಿಡಗಳಿಗೆ ನೀರುಣಿಸಲಾಯಿತು. |
| **421** **21/01/24** | ಬೆಂಗಳೂರು ವಿ.ವಿ.ಆವರಣದಲ್ಲಿಯ ಎನ್.ಎಸ್ ಎಸ್ . ಭವನ ಬಳಿ | ಅದಮ್ಯ ಚೇತನದ ಸಿಬ್ಬಂದಿ, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಕಲ್ಪವೃಕ್ಷ ಚಾರಿಟೇಬಲ್ ಟ್ರಸ್ಟ್ ಸದಸ್ಯರು, ಹಸಿರು ಯೋಧರು, ಯೂತ್ ಫಾರ್ ಸೇವಾ, ಯೂತ್ ಫಾರ್ ಪರಿವರ್ತನ ಸಂಸ್ಥೆಯ ಸದಸ್ಯರು. | 10 ಗಿಡಗಳನ್ನು ನೆಡಲಾಯಿತು. |
| **422** **28/01/24** | ಅದಮ್ಯ ಚೇತನದ ಮುಂದಿನ ರಸ್ತೆ ಬದಿ | ಅದಮ್ಯ ಚೇತನ ಸಿಬ್ಬಂದಿ, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು ಇತರರಿದ್ದರು. | 10 ಗಿಡಗಳನ್ನು ನೆಡಲಾಯಿತು. |
| **423** **04/02/24** | ಬೊಮ್ಮನಹಳ್ಳಿಯ ಗಾರೇಬಾವಿ ಪಾಳ್ಯದ ಎಸ್.ಆರ್.ವಿ. ಶಾಲೆ | ಅದಮ್ಯ ಚೇತನ ಸಂಸ್ಥೆಯ ಸಿಬ್ಬಂದಿ, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು ಇತರರಿದ್ದರು. | 10 ಗಿಡಗಳನ್ನು ನೆಡಲಾಯಿತು. |
| **424** **11/02/24** | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ | ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬಿಎಂಎಸ್ ಕಾಲೇಜಿನ ವಿದ್ಯಾರ್ಥಿಗಳು, ಹಸಿರು ಯೋಧರು ಇತರರಿದ್ದರು. | 10 ಗಿಡಗಳನ್ನು ನೆಡಲಾಯಿತು. |

# ‘ಅಸಾಮಾನ್ಯ ಪ್ರತಿಭಾವಂತ ನಾಯಕ’



**ವಿಜಯಕುಮಾರ್ ಕುಚನೂರೆ**
ಸದಸ್ಯರು, ಕರ್ನಾಟಕ ಲೋಕಸೇವಾ ಆಯೋಗ

ಎಬಿವಿಪಿ ರಾಜ್ಯ ಕಾರ್ಯದರ್ಶಿಯಾಗಿದ್ದ ಅನಂತಕುಮಾರರು ನನಗೆ ಪರಿಚಯವಾಗಿದ್ದು 1983-84ರಲ್ಲಿ. ನಾನಾಗ ಬೆಳಗಾವಿಯ ಗೋಗಟೆ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ಬಿ.ಕಾಂ. ಓದುತ್ತಿದ್ದೆ. ಪರಿಷತ್ತಿನ ಕೆಲಸಗಳಿಗೆಂದು ಬೆಳಗಾವಿಗೆ ಬಂದಾಗ ನನ್ನ ಸೈಕಲ್ಲಿನ ಮೇಲೆ ಡಬಲ್ ಸವಾರಿ ಮಾಡುತ್ತಿದ್ದ ಸರಳ ವ್ಯಕ್ತಿ, ಅವರು. ತಮ್ಮ ಕಾರ್ಯನಿಷ್ಠೆಯ ಮೂಲಕವೇ ನನ್ನಲ್ಲಿ ಮತ್ತು ನನ್ನಂತಹ ಅನೇಕರಲ್ಲಿ ನಾಯಕತ್ವದ ಗುಣ ಬೆಳೆಸಿದವರು. ನಮ್ಮನಡುವೆ ಅಭಿಪ್ರಾಯ ಭೇದ ಬಂದಾಗಲೂ ಅವರು ಮುನಿಸಿಕೊಳ್ಳುತ್ತಿರಲಿಲ್ಲ. ತಪ್ಪಿದ್ದೆಲ್ಲಿ ಎಂದು ವಿಚಾರಿಸಿ, ಸರಿಪಡಿಸಿಕೊಳ್ಳುತ್ತಿದ್ದರು.




1985ರಲ್ಲಿ ದೆಹಲಿಯಲ್ಲಿ ವಿದ್ಯಾರ್ಥಿ ಪರಿಷತ್ತಿನ ಒಂದು ಅಧಿವೇಶನ ನಡೆಯಿತು. ಅನಂತಕುಮಾರರ ಒತ್ತಾಯದ ಮೇರೆಗೆ ಕೈಯಲ್ಲಿ ಕಾಸಿಲ್ಲದಿದ್ದರೂ ನಾನು ದೆಹಲಿಗೆ ಹೋಗಿದ್ದೆ. ದೆಹಲಿಗೆ ಹೋದನಂತರ ನಮ್ಮ ಎಲ್ಲ ವ್ಯವಸ್ಥೆಗಳನ್ನು ಅನಂತಕುಮಾರರೇ ನೋಡಿಕೊಂಡಿದ್ದರು. ನನಗೇ ಅಚ್ಚರಿಯಾಗುವಂತೆ ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಸದಸ್ಯ ಎಂದು ಅನಂತಕುಮಾರರು ನನ್ನ ಹೆಸರನ್ನು ಘೋಷಿಸಿದರು. ಮುಂದೆ ವಿದ್ಯಾರ್ಥಿ ಪರಿಷತ್ತನ್ನು ತೊರೆದು ಪಕ್ಷವನ್ನು ಸೇರಿಕೊಂಡ ಮೇಲೂ ಅವರು ನನಗೆ ನಿರಂತರವಾಗಿ ಮಾರ್ಗದರ್ಶನ ನೀಡುತ್ತಿದ್ದರು.

ಅನಂತಕುಮಾರರು 1987ರಲ್ಲಿ ರಾಜಕೀಯ ಪ್ರವೇಶ ಮಾಡುವಾಗ ನಾನು ಪರಿಷತ್ತಿನಲ್ಲೇ ಇದ್ದೆ. ನನ್ನ ಬಿ.ಕಾಂ. ಮುಗಿದ ಮೇಲೆ ರಾಜಕೀಯಕ್ಕೆ ಬರುವಂತೆ ನನಗೆ ಅವರು ಸಲಹೆ ನೀಡಿದರೂ ನೌಕರಿ ಹಿಡಿಯುವುದೇ ನನ್ನ ಆದ್ಯತೆಯಾಗಿತ್ತು. ಬಿಜೆಪಿಯ ಬಗ್ಗೆ ಯಾರಿಗೂ ಗೊತ್ತಿಲ್ಲದ ಕಾಲ. ಮುಂದೊಂದು ದಿನ ಬಿಜೆಪಿ ಸರ್ಕಾರ ರಚಿಸುತ್ತದೆ ಎಂಬ ಭರವಸೆ ಯಾರಿಗೂ ಇರಲಿಲ್ಲ. ಆದರೂ, ಇವತ್ತಲ್ಲ ನಾಳೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸ ಅನಂತಕುಮಾರ ರಲ್ಲಿತ್ತು.

ನಾನು ನೌಕರಿ ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಆಗ ಅನಂತಕುಮಾರರು ಶಾಸಕರ ಭವನದಲ್ಲಿ ಶಾಸಕರೊಬ್ಬರ ಹೆಸರಿನಲ್ಲಿದ್ದ ಕೋಣೆಯಲ್ಲಿ ವಾಸ ಮಾಡುತ್ತಿದ್ದರು. ನಾನೂ ಮೂರು ತಿಂಗಳು ಅವರ ಜೊತೆಯಲ್ಲೇ ಇದ್ದೆ. ನನಗೆ ಒಂದು ಉದ್ಯೋಗ ಕೊಡಿಸಲೆಂದು ಅವರು ಬಹಳ ಪ್ರಯತ್ನ ಪಟ್ಟಿದ್ದರು. ಕೊನೆಗೂ ಉದ್ಯೋಗ ದೊರೆಯದಿದ್ದಾಗ ನಾನು ಬೆಳಗಾವಿಗೆ ಮರಳಿದೆ. ನಂತರವೂ ಅನಂತಕುಮಾರರು ನನ್ನನ್ನು ವಿಚಾರಿಸಿಕೊಳ್ಳುತ್ತಿದ್ದರು. ಅವರ ಪ್ರೀತಿ-ವಿಶ್ವಾಸ ನನ್ನನ್ನು ರಾಜಕೀಯವಾಗಿ, ಸಾಮಾಜಿಕವಾಗಿ ಬೆಳೆಸಿತು.

ಮುಂದೆ ಅನಂತಕುಮಾರರು ಕೇಂದ್ರದಲ್ಲಿ ನಗರಾಭಿವೃದ್ಧಿ ಸಚಿವರಾದಾಗ ಕಟ್ಟಡ ನಿರ್ಮಾಣ ಸಾಮಗ್ರಿ, ತಂತ್ರಜ್ಞಾನದ ಅಭಿವೃದ್ಧಿ, ಕಡಿಮೆ ವೆಚ್ಚದಲ್ಲಿ ಕಟ್ಟಡಗಳ ನಿರ್ಮಾಣ ಯೋಜನೆಯ ಬಗ್ಗೆ ಯೋಚಿಸುತ್ತಿದ್ದರು. ಇದರಿಂದ ಬಡವರಿಗೆ ತಲೆಯ ಮೇಲೊಂದು ಸೂರು ಹೊಂದುವುದು ಸುಲಭವಾಗಬಹುದು ಎಂಬುದು ಅವರ ಆಶಯ. ಆ ಯೋಜನೆಯನ್ನು ಬೆಳಗಾವಿಗೆ ನೀಡಿದ್ದಲ್ಲದೆ, ಗಿರೀಶ್ ಇನಾಂದಾರರ ಜೊತೆಗೆ ಸಣ್ಣಪುಟ್ಟ ಉದ್ಯೋಗಗಳನ್ನು ಮಾಡಿಕೊಂಡಿದ್ದ ನನಗೆ ಈ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಹುರಿದುಂಬಿಸಿದರು. ಹೀಗಾಗಿ, ನಾವು ಒಂದು ಉದ್ಯಮವನ್ನು ಪ್ರಾರಂಭಿಸಿದೆವು. ಅಲ್ಲಿಂದ ನಮ್ಮ ಜೀವನದ ದಿಕ್ಕೇ ಬೇರೆಯಾಯಿತು.

ಶ್ರೀ ಮುರಳಿಧರನ್ ಅವರು ನ್ಯಾಷನಲ್ ಯುವ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷರಾಗಿದ್ದಾಗ ಕರ್ನಾಟಕದಿಂದ ಅದರ ಸಂಸ್ಥಾಪಕ ನಿರ್ದೇಶಕನಾಗಿ ನನ್ನ ಹೆಸರನ್ನು ಅನಂತಕುಮಾರರು ಸೂಚಿಸಿದರು. ಮುಂದೆ, ನಾನು ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಲೂ ಅನಂತಕುಮಾರರ ಬೆಂಬಲವೇ ಕಾರಣ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ತಾಂತ್ರಿಕ ವಿಭಾಗದ ಸದಸ್ಯನಾಗಿದ್ದೆ. ಅವರ ಆಶೀರ್ವಾದದಿಂದ ಇಂದು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯನಾಗಿಯೂ ಕೆಲಸ ಮಾಡುತ್ತಿದ್ದೇನೆ. ನಾನು ರಾಜಕಾರಣದಲ್ಲಿರದಿದ್ದರೂ ಬೆಳಗಾವಿ ಜಿಲ್ಲೆಯಲ್ಲಿ ಬಿಜೆಪಿಗೆ ಅವಕಾಶವಿದೆಯೇ? ಜನರ ಅಭಿಪ್ರಾಯ ಹೇಗಿದೆ? ಎಂದು ಮುಂತಾದ ವಿಷಯಗಳ ಬಗ್ಗೆ ಅನಂತಕುಮಾರರು ನನ್ನ ಸಲಹೆಗಳನ್ನು ಕೇಳುತ್ತಿದ್ದರು ಅನಂತಕುಮಾರರಿಗೆ ಕನ್ನಡ, ತೆಲುಗು, ಮರಾಠಿ ಭಾಷೆಗಳು ಬರುತ್ತಿದ್ದವು. ಅವರು ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರಕ್ಕೆಂದು ಹೋದಾಗ ನಾನೂ ಅವರ ಜೊತೆಯಲ್ಲಿ ಹೋಗಿದ್ದೆ. ಸೋಲಾಪುರ, ಜತ್, ಅಕ್ಕಲಕೋಟ್‌ಗಳಲ್ಲಿ ಪ್ರಚಾರ ನಡೆಸುವ ವೇಳೆ ಅಂದು ಎಂಎಲ್‌ಸಿ ಆಗಿದ್ದ ನಿತೀನ್ ಗಡ್ಕರಿ ಅವರೊಂದಿಗೂ ಒಂದು ದಿನ ಕಳೆದಿದ್ದೆವು.

ಬಿಜೆಪಿಗೆ ಕರ್ನಾಟಕದಲ್ಲಿ ಭವಿಷ್ಯವೇ ಇಲ್ಲ ಎಂಬಂತಿದ್ದ ಕಾಲದಲ್ಲಿ ವಿಶ್ವಾಸದಿಂದ ಕೆಲಸ ಮಾಡಿದ ಅನಂತಕುಮಾರರು ಕರ್ನಾಟಕದಲ್ಲಿ ಆಶ್ಚರ್ಯಕರ ಬದಲಾವಣೆಗಳನ್ನು ತಂದರು. ಅವರಲ್ಲಿ ಸವಾಲುಗಳನ್ನು ಎದುರಿಸುವ ಛಲವಿತ್ತು. ಒಮ್ಮೆ, ಸೋಲಾಪುರದಿಂದ ನಾವು ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ, “ಸರ್, ನೀವು ರಾಜಕೀಯಕ್ಕೆ ಬರಬೇಕು ಅಂತೀರಿ, ನಾನು ಭವಿಷ್ಯ ಕೇಳಿದ್ದೇನೆ. ರಾಜಕೀಯ ಬಲ ಇಲ್ಲಂತ ಕೇಳೀನಿ” ಅಂದಿದ್ದೆ. ಅದಕ್ಕೆ ಅವರು “ನಾನೂ ಭವಿಷ್ಯ ಕೇಳಿದ್ದೀನಿ. ರಾಷ್ಟ್ರಮಟ್ಟದ ನಾಯಕ ಆಗ್ತೀನಿ, ಇಡೀ ದೇಶಾನೇ ನೋಡುವಾಂಗ ಮಾಡ್ತೀನಿ” ಅಂತ ಹೇಳಿದ್ದರು. ಜಾತಕವನ್ನು ಅವಲಂಬಿಸದೆ ಪ್ರತಿಭೆ ಮತ್ತು ಸತತ ಪ್ರಯತ್ನಗಳಿಂದ ತಮ್ಮ ಕನಸುಗಳನ್ನು ನನಸಾಗಿಸಿಕೊಂಡ ಶ್ರೇಷ್ಠ ವ್ಯಕ್ತಿ, ಅನಂತಕುಮಾರ್.

ಕೇಂದ್ರದಲ್ಲಿ ಸಚಿವರಾಗಿ ಯಶಸ್ವಿಯಾಗಿದ್ದರೂ, ಅಟಲ್ ಮತ್ತು ಅದ್ವಾನಿಯವರ ಸಲಹೆಯ ಮೇರೆಗೆ 2003ರಲ್ಲಿ ರಾಜ್ಯಕ್ಕೆ ಮರಳಿದರು. ಪಕ್ಷ ಬೆಳೆಸುವಂತೆ ಹಿರಿಯರು ನೀಡಿದ ಆದೇಶವನ್ನು ಅನಂತಕುಮಾರರು ನಿಷ್ಠೆಯಿಂದ ಪಾಲಿಸಿದರು. ಯಡಿಯೂರಪ್ಪನವರಿಗೆ ಹೆಗಲೆಣೆಯಾಗಿ ದುಡಿದು ಪಕ್ಷವನ್ನು ಪ್ರವರ್ಧಮಾನಕ್ಕೆ ತಂದರು; ಅಸಾಧ್ಯವೆಂಬಂತಿದ್ದ ಕೆಲಸವನ್ನು ಸಾಧ್ಯ ಮಾಡಿ ತೋರಿಸಿದರು.

ಅಂದು ಜನತಾ ಪಕ್ಷದಲ್ಲಿದ್ದ ಉಮೇಶ್ ಕತ್ತಿ ನಮ್ಮನ್ನು ನೋಡಿ “ಏನದು, ಬಿಜೆಪಿ ಪಾರ್ಟಿ? ನಿವೃತ್ತ ಮಾಸ್ತರಗಳನ್ನು ಕರೆದುಕೊಂಡು ಬಂದು ಎಂಎಲ್‌ಸಿ ಮಾಡ್ತೀರಿ, ನೀವು ಯಾವಾಗ ಪಾರ್ಟಿ ಬೆಳೆಸೋರು” ಎಂದು ತಮಾಷೆ ಮಾಡುತ್ತಿದ್ದರು, ನಂತರ, ಅವರೇ ಅನಂತಕುಮಾರರ ಪ್ರಭಾವಕ್ಕೊಳಗಾಗಿ ಬಿಜೆಪಿ ಸೇರಿ, ಸಚಿವರೂ ಆದರು. ಅನಂತಕುಮಾರರನ್ನು ರಾಜ್ಯದ ಮುಖ್ಯಮಂತ್ರಿಯಾಗಿ ನೋಡುವುದು ನಮ್ಮೆಲ್ಲರ ಕನಸಾಗಿತ್ತು. ಅವರ ಅಕಾಲಿಕ ನಿಧನದಿಂದ ಆ ಕನಸು ಕನಸಾಗಿಯೇ ಉಳಿಯಿತು.

ಆ ಕಾಲದಲ್ಲಿ, ನಮಗಿಂತಲೂ ಅವರ ಆರ್ಥಿಕಸ್ಥಿತಿ ಹೀನವಾಗಿತ್ತು. ಅವರಿಗೆ ಸ್ವಂತ ಮನೆಯೂ ಇರಲಿಲ್ಲ. ಇಂತಹ ಸಾಮಾನ್ಯ ಹಿನ್ನೆಲೆಯ ಅನಂತಕುಮಾರರು ಅಸಾಮಾನ್ಯ ಎತ್ತರಕ್ಕೆ ಬೆಳೆದ ಪರಿ ಎಂಥವರಿಗೂ ಪ್ರೇರಣಾದಾಯಕ.

# “ಭಾರತ ರತ್ನ” ಲಾಲ್ ಕೃಷ್ಣ ಅದ್ವಾನಿ

ಪುಟ 7 ರಿಂದ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದು. ಪಕ್ಷದ ಬೆಳವಣಿಗೆಗೆ ಜನಸಂಪರ್ಕವೊಂದೇ ಸಾಧನ ಎಂದು ತಿಳಿದ ಅದ್ವಾನಿಯವರು ಈ ನಿಟ್ಟಿನಲ್ಲಿ ಅನೇಕ ಯಾತ್ರೆಗಳನ್ನು ಕೈಗೊಂಡರು. ಅವುಗಳಲ್ಲಿ ರಾಮರಥ ಯಾತ್ರೆ (೧೯೯೦), ಜನಾದೇಶ ಯಾತ್ರೆ (೧೯೯೩), ಸ್ವರ್ಣಜಯಂತಿ ರಥಯಾತ್ರೆ (೧೯೯೭), ಭಾರತ ಉದಯಯಾತ್ರೆ (೨೦೦೪), ಭಾರತ ಸುರಕ್ಷಾಯಾತ್ರೆ (೨೦೦೬) ಮತ್ತು ಜನಚೇತನಾ ಯಾತ್ರೆ (೨೦೧೧) ಮುಖ್ಯವಾದವುಗಳು.

ಅದ್ವಾನಿಯವರು ಸಂಸ್ಕೃತಿಜೀವಿಯೂ ಹೌದು. ಸಿನಿಮಾ ಪ್ರಿಯರಾಗಿದ್ದ ಅವರಿಗೆ ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಗಳ ದಿಗ್ಗಜರ ಸಂಪರ್ಕವಿತ್ತು. ಅವರು ದೀರ್ಘಕಾಲ ಆರ್ಗನೈಸರ್ ಪತ್ರಿಕೆಯ ಸಂಪಾದಕರಾಗಿದ್ದರು. ಅವರ ಸುಪ್ರಸಿದ್ಧ ಆತ್ಮಚರಿತ್ರೆ “ನನ್ನ ದೇಶ; ನನ್ನ ಜೀವನ” (My Country; My Life) ಅನೇಕ ಭಾಷೆಗಳಿಗೆ ಅನುವಾದಗೊಂಡಿದೆ. ಬೆಂಗಳೂರಿನ ಜೈಲುವಾಸದ ಸಂದರ್ಭದಲ್ಲಿ ಅವರು ಕನ್ನಡವನ್ನೂ ಕಲಿತಿದ್ದರು ಎಂಬುದು ವಿಶೇಷ.

ಸರ್ವಸ್ವವನ್ನೂ ಕಳೆದುಕೊಂಡು ನಿರಾಶ್ರಿತರಾಗಿ ಭಾರತಕ್ಕೆ ಆಗಮಿಸಿದ ಅದ್ವಾನಿಯವರು ತಮ್ಮ ವ್ಯಕ್ತಿತ್ವ, ಕರ್ತೃತ್ವ, ನೇತೃತ್ವಗಳಿಂದ ರಾಜಕೀಯದ ದಿಕ್ಕನ್ನೇ ಬದಲಿಸಿದರು. “ಲೋಹ ಪುರುಷ” ಎಂಬ ಅನ್ವರ್ಥ ಬಿರುದಿನೊಂದಿಗೆ ಜನಮಾನಸದಲ್ಲಿ ನೆಲೆಸಿರುವ ಅದ್ವಾನಿಯವರಿಗೆ ಅತ್ಯುತ್ತಮ ಸಂಸದೀಯ ಪಟು, ಪದ್ಮವಿಭೂಷಣ ಮುಂತಾದ ಪ್ರಶಸ್ತಿಗಳು ದೊರೆತಿವೆ. ಇದೀಗ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ, “ಭಾರತ ರತ್ನ”ದ ಗರಿ ಅವರ ಮುಕುಟವನ್ನೇರಿದೆ. ಸದ್ಯ, ೯೭ ವರ್ಷದ ಅದ್ವಾನಿಯವರು ಭಾರತೀಯ ಜನತಾ ಪಕ್ಷದ ಮಾರ್ಗದರ್ಶಕರಾಗಿ ದೆಹಲಿಯಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

# ಅದಮ್ಯಚೇತನ ತಿಂಗಳ ವರದಿ (15 ಜನವರಿ 2024 ರಿಂದ 15 ಫೆಬ್ರವರಿ 2024)

**ಅಯೋಧ್ಯೆಯಲ್ಲಿ ಅದಮ್ಯ ಚೇತನದಿಂದ ನಿತ್ಯ ಅನ್ನದಾನ :** "ಅಯೋಧ್ಯೆಯ ಶ್ರೀರಾಮ ಮಂದಿರದ ಯಾತ್ರೆಗೆ ಬರುವ ಭಕ್ತರಿಗಾಗಿ 2024ರ ಜ. 22ರಿಂದ ಒಂದು ತಿಂಗಳ ಕಾಲ "ಅನ್ನದಾಸೋಹ" ಕಾರ್ಯಕ್ರಮವನ್ನು ಅದಮ್ಯಚೇತನ ಸಂಸ್ಥೆಯು ಹಮ್ಮಿಕೊಂಡಿದೆ. ಈ ಸೇವಾಕಾರ್ಯವನ್ನು ಮುಂದುವರಿಸಿಕೊಂಡು ಹೋಗುವಂತೆ ಬರುತ್ತಿರುವ ಸಲಹೆಗಳ ಹಿನ್ನೆಲೆಯಲ್ಲಿ ಇದನ್ನು ವಿಸ್ತರಿಸುವ ಚಿಂತನೆಯಿದೆ" ಎಂದು ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಿಳಿಸಿದರು. ಪ್ರಾಣಪ್ರತಿಷ್ಠಾಪನಾ ಸಮಿತಿಯ ಆಹ್ವಾನದ ಮೇರೆಗೆ ಅಯೋಧ್ಯೆಯ ಸಮಾರಂಭಗಳಲ್ಲಿ ಭಾಗವಹಿಸಿ ಹಿಂದಿರುಗಿದ ಅವರು ತಮ್ಮ ಅಭೂತಪೂರ್ವ ಅನುಭವಗಳನ್ನು ಜನವರಿ ತಿಂಗಳ ಎ-ಚಾಟ್ ಕಾರ್ಯಕ್ರಮದಲ್ಲಿ ಹಂಚಿಕೊಳ್ಳುತ್ತಾ ಈ ಚಿಂತನೆಯನ್ನು ವ್ಯಕ್ತಪಡಿಸಿದರು.




ಕೆಲವು ಆಹ್ವಾನಿತರ ಆಗ್ರಹದ ಮೇರೆಗೆ ಇನ್ನೊಬ್ಬರಿಗೆ ಭಾಗವಹಿಸುವ ಅವಕಾಶ ನೀಡುವ ಸಮಿತಿಯ ನಿರ್ಧಾರದಂತೆ ವಿಜೇತಾ ಅನಂತಕುಮಾರ್‌ಗೆ ಕೂಡಾ ನನ್ನೊಂದಿಗೆ ಸಮಾರಂಭಗಳಲ್ಲಿ ಭಾಗವಹಿಸುವ ಸುಯೋಗ ಲಭ್ಯವಾಯಿತು. ಅಯೋಧ್ಯೆಯನ್ನು ತಲುಪಿದ ಎಲ್ಲ ಗಣ್ಯರನ್ನೂ ಸಾಂಪ್ರದಾಯಿಕ ರೀತಿಯಲ್ಲಿ ಸ್ವಾಗತಿಸಲಾಗಿತ್ತು. ದೇವಾಲಯದ ಪರಿಸರದ ಅರ್ಧ ಕಿಲೋಮೀಟರ್ ಫಾಸಲೆಯಲ್ಲಿ ಯಾವುದೇ ವಾಹನಗಳಿಗೆ ಪ್ರವೇಶವಿರಲಿಲ್ಲ. ಅತ್ಯಂತ ಕಟ್ಟುನಿಟ್ಟಿನ ಸುರಕ್ಷತಾ ವ್ಯವಸ್ಥೆಗಳಿದ್ದರೂ ಅದರಿಂದ ಗಣ್ಯರಿಗೆ ಯಾವ ಅನಾನುಕೂಲತೆಯೂ ಉಂಟಾಗಲಿಲ್ಲವೆಂಬುದು ಗಮನಾರ್ಹ. ಗಣ್ಯರಿಗೆ ವಿಶೇಷವಾದ ಆಸನ ವ್ಯವಸ್ಥೆಗಳನ್ನು ಮಾಡಲಾಗಿತ್ತು. ನಮ್ಮ ಕಕ್ಷೆಯಲ್ಲಿ ಕುಳಿತಿದ್ದ ಅನೇಕ ಗಣ್ಯರನ್ನು ಭೇಟಿಯಾಗುವುದು ಸಾಧ್ಯವಾಯಿತು. ಭಾಗವಹಿಸಿದ ಎಲ್ಲ ಗಣ್ಯರೂ ಗಂಟೆಗಳ ಕಾಲ ಶಾಂತಿಯಿಂದ ಸರತಿಯ ಸಾಲಿನಲ್ಲಿ ನಿಂತು ಶ್ರೀರಾಮನ ಮೊದಲ ನೋಟವನ್ನು ಕಣ್ತುಂಬಿಸಿಕೊಂಡರು ಎಂದು ಅವರು ತಿಳಿಸಿದರು.

ಅಯೋಧ್ಯೆಯಲ್ಲಿ ಜರುಗುತ್ತಿರುವ ಈ ಐತಿಹಾಸಿಕ ಕಾರ್ಯದಲ್ಲಿ ಕನ್ನಡಿಗರ ಪಾತ್ರ ಗಮನಾರ್ಹವಾಗಿದೆ. ಬಾಲರಾಮನ ಮೂರ್ತಿಯನ್ನು ಕಟೆದ ಶಿಲ್ಪಿ ಯೋಗಿರಾಜ್ ಮೈಸೂರಿನವರು. ಪ್ರಾಣಪ್ರತಿಷ್ಠಾಪನೆ ವಿಧಿಗಳ ಮಾರ್ಗದರ್ಶನ ನೀಡಿದವರು ಪೇಜಾವರ ಸ್ವಾಮಿಗಳು. ದೇವಾಲಯದ ಗ್ರಾನೈಟ್ ಶಿಲೆಗಳನ್ನು ಕರ್ನಾಟಕದಿಂದ ತರಿಸಲಾಗಿತ್ತು. ನಾಗಸ್ವರ ವಾದಕರ ತಂಡವನ್ನು ಮಂಡ್ಯದಿಂದ ಕರೆಸಲಾಗಿತ್ತು. ಪ್ರಾಣಪ್ರತಿಷ್ಠಾಪನೆ ಸಮಾರಂಭಗಳ ನೇತೃತ್ವ ವಹಿಸಿದವರು ಕರ್ನಾಟಕದ ಗೋಪಾಲ್‌ಜೀಯವರು. ಹೀಗಾಗಿ, ಅಯೋಧ್ಯೆಯಲ್ಲಿ ನಿತ್ಯ ಅನ್ನದಾನವನ್ನು ಪ್ರಾರಂಭಿಸುವಂತೆ ದೇವಾಲಯ ಸಮಿತಿಯು ನೀಡಿದ ಆಹ್ವಾನವನ್ನು ಸ್ವೀಕರಿಸಿದ ಅದಮ್ಯ ಚೇತನ ಸಂಸ್ಥೆಯು ದಿನಾಂಕ ೨೨ರಿಂದ ಉಚಿತ ಪ್ರಸಾದ ವಿತರಣೆ ಕಾರ್ಯವನ್ನು ಪ್ರಾರಂಭಿಸಿದೆ ಎಂದು ಅವರು ಹೇಳಿದರು. ಪ್ರಸಾದ ವಿತರಣೆ ಕಾರ್ಯಕ್ಕೆ ಮಾಡಿಕೊಂಡ ಸಿದ್ಧತೆಗಳ ಕುರಿತು ವಿವರವಾಗಿ ಮಾತನಾಡಿದ ಅವರು ಮಾರ್ಗಮಧ್ಯದಲ್ಲಿ ಉಂಟಾದ ಅಡಚಣೆಯನ್ನು ಸ್ಥಳೀಯ ನಾಯಕರು ಮತ್ತು ಕೇಂದ್ರ ಸಚಿವರಾದ ಜ್ಯೋತಿರಾದಿತ್ಯ ಸಿಂಧ್ಯಾರವರ ನೆರವಿನಿಂದ ನಿವಾರಿಸಿಕೊಂಡ ರೋಚಕ ಸಂಗತಿಯನ್ನೂ ತಿಳಿಸಿದರು.

**ಅದಮ್ಯ ಚೇತನ ಸಂಸ್ಥೆಯ ಸೇವೆಗಳ ವಿವರ:** ಅದಮ್ಯ ಚೇತನ ಹಾಗೂ ಅನಂತಕುಮಾರ್ ಪ್ರತಿಷ್ಠಾನಗಳ ಚಟುವಟಿಕೆಗಳಾದ ಶ್ರೀಚೇತನ ಸಭೆಯ ವಿವರಗಳ ಬಗ್ಗೆ ಶ್ರೀಮತಿ ಸುಜಾತ, ಹಸಿರು ಭಾನುವಾರದ ಕುರಿತು ಶ್ರೀ ಎನ್. ಪ್ರಕಾಶ್, ಭಗವದ್ಗೀತೆ ಪಠಣದ ಕುರಿತು ಶ್ರೀಮತಿ ಗೀತಾ ಗಣೇಶ್, ಪ್ಲೇಟ್ ಬ್ಯಾಂಕ್ ಬಗ್ಗೆ ಶೀಮತಿ ಮೀನಾ ಶಾಸ್ತ್ರಿ ಅದಮ್ಯ ಚೇತನ ಅಡುಗೆಮನೆಯ ಸೇವೆಗಳ ವಿವರಗಳನ್ನು ಶ್ರೀ ಪೂರ್ಣಪ್ರಜ್ಞ, ಮತ್ತು ಅನಂತಕುಮಾರ್ ಪ್ರತಿಷ್ಠಾನದ ಚಟುವಟಿಕೆಗಳ ಕುರಿತು ಶ್ರೀ ಪ್ರದೀಪ್ ಓಕ್ ಮಾತನಾಡಿದರು.

**ಗಮನ ಸೆಳೆದ ಕಿರುಪ್ರಹಸನ:** ಖ್ಯಾತ ಸಾಹಿತಿ ಬೀChi ಅವರ "ಚಿನ್ನದ ಕಸ" ಕೃತಿಯಿಂದ ಆಯ್ದ "ಬೀChi - ಬೇಂದ್ರೆ, ಮುಖ್ಯಮಂತ್ರಿ ಆದ್ರೆ" ಎಂಬ ಕಿರುಪ್ರಹಸನವನ್ನು ಖ್ಯಾತ ಕಲಾವಿದರಾದ ಶ್ರೀ ಅಬ್ಬೂರು ಜಯತೀರ್ಥ, ಶ್ರೀ ಜಿ.ಪಿ ನಾಗರಾಜನ್ ಮತ್ತು ಶ್ರೀ ಅರುಣ ಅವರು ಪ್ರದರ್ಶಿಸಿದರು. ಶ್ರೀ ತ್ರಿವಿಕ್ರಮ ಜೋಶಿಯವರು ಪ್ರಾರ್ಥಿಸಿದರು. ಹಿರಿಯರಾದ ಶ್ರೀ ಎಂ ಬಸವರಾಜ್ ಸ್ವಾಗತಿಸಿದರು. ಶ್ರೀಮತಿ ಕಾವ್ಯ ಜಿ ರಾವ್ ಕಾರ್ಯಕ್ರಮವನ್ನು ನಿರೂಪಿಸಿದರು.

**ಗಣ್ಯರ ಭೇಟಿ:** 2024ರ ಫೆ.4ರಂದು ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ವಿಜಯಕುಮಾರ್ ಕುಚನೂರೆ, ಮೈಸೂರಿನ ಇತಿಹಾಸ ತಜ್ಞ, ಶ್ರೀ ಎಲ್. ಎನ್. ಸ್ವಾಮಿ, 2024ರ ಜ. 20ರಂದು ಬೆಂಗಳೂರಿನ ಬಸವನಗುಡಿಯ "ಮನೋನಂದನ" (ವಿಶೇಷಚೇತನರ ಸೇವಾ ಸಂಸ್ಥೆ) ಟ್ರಸ್ಟಿ ಜೆ.ಎಸ್. ನಾಗಭೂಷಣ, ವಿಜಯಕರ್ನಾಟಕದ ಆರು ಜನ ಸಿಬ್ಬಂದಿಗಳು ಅನಂತಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದ್ದರು.

2024ರ ಫೆ. 7ರಂದು ಬಿಬಿಎಂಪಿ ಆಯುಕ್ತ ವಿಜಯಕುಮಾರ್, 2024ರ ಜ. 16ರಂದು ಬೆಂಗಳೂರಿನ ಪ್ರಸಿದ್ಧ ವೈದ್ಯ, ಡಾ. ಶೇಖರ್ ಪಾಟೀಲ್ ಅವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು. ಬೆಂಗಳೂರಿನ ಸ್ವದೇಶಿ ಸ್ವದೇಶಿ ಮೇಳದ ಆಯೋಜಕರಾದ ಅಮಿತ್ ಅಮರನಾಥ್ ಹಾಗೂ ಇತರರು 2024ರ ಫೆ. 8ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದರು.

**ಇತರ ಚಟುವಟಿಕೆಗಳು :** ಅದಮ್ಯ ಚೇತನದ ಹಸಿರು ಭಾನುವಾರ, ಶ್ರೀ ಚೇತನ ಸಭೆ, ಶ್ರೀಮದ್ ಭಗವದ್ಗೀತೆ ಪಠಣ, ಚಿಣ್ಣರ ಚೇತನ ಗೋಡೆಪತ್ರಿಕೆ ಬಿಡುಗಡೆ, ಪ್ಲೇಟ್ ಬ್ಯಾಂಕ್ ಸೇರಿದಂತೆ ಇತರ ಸೇವೆಗಳು ನಡೆದವು.




## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Venkatesh Manu / Trivikram Joshi**
Inputs: **Poornaprajna / Srikanth K / ACF / AKP**
Photographs: **Gopal TS / Internet Sources / AKP / ACF**
Acknowledgements: **GM Inamdar**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೊಪ್ಪಳ ಜಿಲ್ಲಾ ಮಹಿಳಾ ಘಟಕದ ಸದಸ್ಯರು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಕೊಪ್ಪಳದಲ್ಲಿ ಸನ್ಮಾನಿಸಿದರು




ಫೆಬ್ರವರಿ ತಿಂಗಳ "ಚಿಣ್ಣರ ಚೇತನ" ಗೋಡೆ ಪತ್ರಿಕೆಯನ್ನು ಹಿರಿಯ ಕಲಾವಿದ ಅಬ್ಬೂರು ಜಯತೀರ್ಥ ಅವರು ಅದಮ್ಯ ಚೇತನ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು.



ಕೊಪ್ಪಳ ಗವಿಸಿದ್ದೇಶ್ವರ ಮಠದ ಆಹ್ವಾನದ ಮೇರೆಗೆ ಮುಖ್ಯ ಅತಿಥಿಗಳಾಗಿ ಜಾತ್ರೆಗೆ ತೆರಳಿದ್ದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು, ಮಠದ ಅಡುಗೆ ಮನೆಗೆ ಭೇಟಿ ನೀಡಿ, ಅಲ್ಲಿಯ ಚಟುವಟಿಕೆಗಳನ್ನು ವೀಕ್ಷಿಸಿದರು..



ಅದಮ್ಯ ಚೇತನ ಸಂಸ್ಥೆಗೆ ಮಂತ್ರಾಲಯದ ರಾಘವೇಂದ್ರಸ್ವಾಮಿ ಮಠದ ಹಿರಿಯ ಕಾರ್ಯಕರ್ತರಾದ ಶ್ರೀ ಶ್ರೀನಿವಾಸ ಕಸ್ಬೆ ಹಾಗೂ ಶ್ರೀಮತಿ ವಿದ್ಯಾ ಕಸ್ಬೆ ಅವರು ಭೇಟಿ ನೀಡಿದ ಸಂದರ್ಭ



ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರಕ್ಕೆ ಬೆಂಗೇರಿಯ ರೋಟರಿ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭೇಟಿ ನೀಡಿದ್ದರು.



ಹನುಮಂತನಗರದ ಶ್ರೀ ವಿವೇಕಾನಂದ ಪ್ರೌಢಶಾಲೆಯ ವಿದ್ಯಾರ್ಥಿಗಳು 2024ರ ಜ. 30 ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು.



ಅದಮ್ಯ ಚೇತನ ಸಂಸ್ಥೆಯಿಂದ ಲಾಲ್ ಬಾಗ್ ಪಶ್ಚಿಮ ದ್ವಾರ ಬಳಿಯ ಅನಂತಸ್ಮೃತಿ ವನದಲ್ಲಿ ಸಾರ್ವಜನಿಕ ರಿಗಾಗಿ ನಡೆಯುತ್ತಿರುವ ನಿತ್ಯ ಅನ್ನದಾನದ ದೃಶ್ಯ.



ಅದಮ್ಯ ಚೇತನದ 423 ನೇ ಹಸಿರು ಭಾನುವಾರ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ ಆವರಣದಲ್ಲಿ ಜರುಗಿತು

## ಅನಂತ ಚಿತ್ರಸಂಪುಟ

**ಹಿರಿಯ ನಾಯಕ ಶ್ರೀ ಲಾಲ್ ಕೃಷ್ಣ ಅದ್ವಾನಿಯವರ ವಿಶ್ವಾಸಕ್ಕೆ ಪಾತ್ರರಾದ ಯುವಮುಖಂಡರಲ್ಲಿ ಅನಂತಕುಮಾರ್ ಮೊದಲಿಗರು. ಅನಂತಕುಮಾರರ ನಾಯಕತ್ವ, ಕಾರ್ಯಕೌಶಲ, ಸಾಮರ್ಥ್ಯಗಳಲ್ಲಿ ಅದ್ವಾನಿಯವರಿಗೆ ಪೂರ್ಣ ಭರವಸೆಯಿದ್ದಿತು. ಅದ್ವಾನಿಯವರು ದೇಶಾದ್ಯಂತ ಕೈಗೊಂಡಿದ್ದ ವಿವಿಧ ಜಾಗೃತಿಯಾತ್ರೆಗಳ ಯಶಸ್ಸಿಗೆ ಅನಂತಕುಮಾರ್ ಅವಿರತವಾಗಿ ಶ್ರಮಿಸಿದರು.**





























